ಶ್ರೀ ಅನಂತಕೀರ್ತಿ ಗ್ರಂಥಮಾಲೆಯ ೧೨ನೆಯ ಪುಷ್ಪ

ಶ್ರೀ ಪಾರ್ಶ್ವನಾಥ ಚಂಪು

ಜಿ. ಪಿ. ರಾಜರತ್ನಂ

ಪ್ರಕಾಶಿಕೆ
ದೇಜಮ್ಮನವರು

ವಿವರ

	ಪುಟ

ಅರಿಕೆ

ಈ 'ಶ್ರೀ ಪಾರ್ಶ್ವನಾಥ ಚಂಪು'ವನ್ನು ಶ್ರೀ ಅನಂತಕೀರ್ತಿ ಗ್ರಂಥ ಮಾಲೆಯ ಹನ್ನೆರಡನೆಯ ಪುಷ್ಪವನ್ನಾಗಿ ತೆಗೆದುಕೊಂಡು ಈ ವರುಷದ ಜೀವದಯಾಷ್ಟಮಿಯ ದಿನ ಶಾಸ್ತ್ರದಾನಕ್ಕೆ ಉಪಯೋಗಿಸಿದ ಕೃಪೆಗಾಗಿ ಪಣಪಿಲ ಅರಮನೆಯ ಶ್ರೀಮಾನ್ ಶ್ರೀವರ್ಮ ಶೆಟ್ಟರಿಗೂ ಅವರ ಧರ್ಮಪತ್ನಿ ಶ್ರೀಮತೀ ದೇಜಮ್ಮನವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಇಲ್ಲಿ ಮೊದಲು ಅರ್ಪಿಸುತ್ತೇನೆ.

ಜೈನ ಧರ್ಮಸಾಹಿತ್ಯಗಳನ್ನು ಜೈನೇತರರಿಗೂ ಪರಿಚಯ ಮಾಡಿಕೊಡಬೇಕೆಂಬ ಬಯಕೆಯಿಂದ ನಾನು ಬರೆಯತೊಡಗಿರುವ ಪುಸ್ತಕಗಳಲ್ಲಿ ಇದು ನಾಲ್ಕನೆಯದು. ಮೊದಲನೆಯದೆರಡೂ ಭಗವಂತನಾದ ಮಹಾವೀರನನ್ನು ಕುರಿತದ್ದು. ಮೂರನೆಯದು ಶ್ರೀ ಗೋಮಟೇಶ್ವರ ಸ್ವಾಮಿಯ ಸಂಬಂಧವಾದುದು.

ನಾನು ಮೊದಲು ಶ್ರೀ ಪಾರ್ಶ್ವತೀರ್ಥಂಕರನ ಚರಿತ್ರೆಯನ್ನು ಗದ್ಯದಲ್ಲಿ ಬರೆಯಬೇಕೆಂದು ಹೊರಟವನು. ಆದರೆ, ಶ್ರೀ ಗೋವಿಂದ ಪೈಗಳು ವಾದಿರಾಜಸೂರಿಯ ಗ್ರಂಥವನ್ನು ಆಧರಿಸಿ ಶ್ರೀಮತೀ ಪಣಪಿಲ ದೇಜಮ್ಮನವರ ಶಾಸ್ತ್ರದಾನಕ್ಕಾಗಿ ಇದೇ ಚರಿತ್ರೆಯನ್ನು ೧೯೩೩ರಲ್ಲೂ ಶ್ರೀ ಶಾಂತಿರಾಜಶಾಸ್ತ್ರಿಗಳು ಗುಣಭದ್ರಾಚಾರ್ಯರ ಮತ್ತು ಚಾವುಂಡರಾಯನ ಕೃತಿಗಳ ಬಲದಿಂದ ಶ್ರೀ ಉಪಾಧ್ಯರ ನಾಗರಾಜಯ್ಯನವರ ಶಾಸ್ತ್ರದಾನಕ್ಕಾಗಿ ಇದೇ ಚರಿತ್ರೆಯನ್ನು ೧೯೩೪ರಲ್ಲೂ ಗದ್ಯರೂಪವಾಗಿ ಬರೆದಿರುವುದರಿಂದಲೂ; ಪಾರ್ಶ್ವಪಂಡಿತನ ಪಾರ್ಶ್ವನಾಥಪುರಾಣವು ಇನ್ನೂ ಅಚ್ಚಾಗಿಲ್ಲದಿರುವದರಿಂದಲೂ; ಪಾರ್ಶ್ವನಾಥಪುರಾಣ ಚಾವುಂಡರಾಯಪುರಾಣಗಳ ಐಕ್ಯದಿಂದ ಈ ಚಿಕ್ಕ ಚಂಪೂವನ್ನು ಕಟ್ಟಿ ಇಟ್ಟಿರುತ್ತೇನೆ.*

---

*ಇಲ್ಲಿ ಕೆಲವು ಹಳಗನ್ನಡ ವ್ಯಾಕರಣದೋಷ ನಿಂತಿವೆ. ಆದರೆ ಅರ್ಥ ಕೆಡದಿರುವದರಿಂದ ಇವಕ್ಕೆ ತಿದ್ದುಪಡಿ ಕೊಟ್ಟಿಲ್ಲ.

ನನ್ನ ಹಿಂದಿನ ಪುಸ್ತಕಗಳಲ್ಲಿ ಹೇಳದಿರುವ ಹಲವು ವಿಷಯಗಳನ್ನು ಒಳಕೊಂಡ "ಕನ್ನಡ ಜೈನ ಪುರಾಣಗಳು" ಮತ್ತು "ಜೈನಪುರಾಣ ಪರಂಪರೆ" ಎಂಬ ಎರಡು ಲೇಖನಗಳು ಇಲ್ಲಿ ಮುನ್ನುಡಿ ರೂಪವಾಗಿವೆ. ಮುನ್ನುಡಿಯ ಕೆಲವು ಮಾತಿಗೆ ಅನುಬಂಧದಲ್ಲಿ ವಿವರಣೆಯಿದೆ.

ಒಂದು ಹೆಚ್ಚು ವಿಷಯ: ಪುಟ ೫೫ರಲ್ಲಿ ಕೊಟ್ಟಿರುವ ಗ್ರಂಥ ಮಾಲೆಗೆ ಚಿಕ್ಕಪದ್ಮಣಶೆಟ್ಟಿಯ ಅನಂತನಾಥಚರಿತೆ (೧೬), ಬಂಧು ವರ್ಮನ ಹರಿವಂಶಾಭ್ಯುದಯ (೧೨), ಮತ್ತು ಸಾಳ್ವಭಾರತ ಅಥವಾ ನೇಮೀಶ್ವರಚರಿತೆ(೧೬)–ಎಂಬಿವನ್ನು ದಯೆಮಾಡಿ ಸೇರಿಸಿಕೊಳ್ಳಬೇಕು.

ಈ ಪುಸ್ತಕ ಸಹೃದಯರ ಮಡಲಿನಲ್ಲಿ ಬೆಳೆಯಲಿ.

'ಶಾಕ್ಯಮಂಟಪ'
ಮಲ್ಲೇಶ್ವರ

ಜಿ. ಪಿ. ರಾಜರತ್ನಂ.

ಕನ್ನಡ ಜೈನ ಪುರಾಣಗಳು

ಭಗವಂತನಾದ ಬುದ್ಧನ ಹಿರಿಯ ಸಮಕಾಲಿಕ ಭಗವಾನ್ ಮಹಾವೀರ. ಈತನು ಜೈನರ ಸದ್ಯಃಕಾಲದ ೨೪ನೆಯ ತೀರ್ಥಂಕರ. ಈತನೂ ಈತನಿಗೆ ೨೫೦ ವರ್ಷ ಹಿಂದಿನ ಪಾರ್ಶ್ವನಾಥನೂ ಐತಿಹಾಸಿಕ ಶೋಧನೆಗೆ ನಿಲುಕಿರುವ ವ್ಯಕ್ತಿಗಳು. ಪಾರ್ಶ್ವನಿಗೆ ಹಿಂದಿನವರೆಂದು ಹೇಳುವ ಉಳಿದ ಇಪ್ಪತ್ತೆರಡು ತೀರ್ಥಂಕರರನ್ನು ಪೌರಾಣಿಕ ವ್ಯಕ್ತಿಗಳೆಂದು ಗಣಿಸಲಾಗಿದೆ. ಈ ತೀರ್ಥಂಕರರು ಕೆಲಕೆಲವರ ಕಾಲದಲ್ಲಿ ಷಟ್ಖಂಡ ಭೂಮಿಗೆ ಒಡೆಯರಾದ ಕೆಲಕೆಲವರು ಚಕ್ರವರ್ತಿಗಳು ಆಗಿ ಹೋದರು ; ಇವರ ಸಂಖ್ಯೆ ೧೨. ಇವರಂತೆಯೇ ಕೆಲಕೆಲವು ತೀರ್ಥಂಕರರ ಕಾಲದಲ್ಲಿ ನಾರಾಯಣ ವಾಸುದೇವರೆಂಬ ಸಹೋದರರೂ ಅವರಿಗೆ ಎದುರಾಗಿ ಎದ್ದು ಅವರಿಂದ ಹತರಾದ ಪ್ರತಿವಾಸುದೇವರೆಂಬ ಉದ್ಧತರೂ ಆಗಿಹೋದರು; ಇವರ ಸಂಖ್ಯೆ ೯. ಈ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ನಾರಾಯಣರು, ೯ ವಾಸುದೇವರು, ೯ ಪ್ರತಿವಾಸುದೇವರು ಕೂಡಿ ಆದ ಅರುವತ್ತುಮೂವರನ್ನು ಜೈನರು "ತ್ರಿಷಷ್ಟಿ ಶಲಾಕಾ ಪುರುಷರು" ಎಂದು ಕರೆಯುವರು. ಈ ಶಲಾಕಾಪುರುಷರು ಜೈನರ ಮಹಾಪುರುಷರು. ಹಿಂದುಗಳಿಗೆ ಚಿರಪರಿಚಿತರಾದ ಋಷಭ, ರಾಮ, ಕೃಷ್ಣ ಎಂಬ ಅವತಾರಗಳನ್ನೂ ಚಕ್ರವರ್ತಿಗಳಾದ ಭರತ ಸಗರರನ್ನೂ ಈ ಶಲಾಕಾಪುರುಷರ ಪಂಕ್ತಿಯಲ್ಲಿ ಕಾಣಬಹುದು.

ಜೈನರ ಮಹಾಪುರುಷರಾದ ಈ ಶಲಾಕಾಪುರುಷರ ಜೀವನ ಕಥೆಗೆ ಅಚ್ಚುಕಟ್ಟಾದ ಕೈಪಿಡಿಯೆಂದರೆ ಚಾವುಂಡರಾಯನ "ತ್ರಿಷಷ್ಟಿ ಶಲಾಕಾಪುರುಷ ಚರಿತೆ". ಜೈನದೃಷ್ಟಿಯಿಂದ ಈ ಶಲಾಕಾಪುರುಷರನ್ನು ಕುರಿತು ತಿಳಿಯಬೇಕಾದುದೆಲ್ಲವನ್ನೂ ಚಾವುಂಡರಾಯನು ಇದರಲ್ಲಿ ಅಡಕವಾಗಿ ಸಂಗ್ರಹಿಸಿರುವನು. [ಈ ಪುಸ್ತಕ ಇನ್ನೂ ಪೂರ್ತಿ ಅಚ್ಚಾಗಿಲ್ಲ. ಇದರಲ್ಲಿನ ಮೊದಲ ತೀರ್ಥಂಕರನ ಹಾಗೂ ಮೊದಲ ಚಕ್ರವರ್ತಿಯ ಕಥೆಯನ್ನು "ಕನ್ನಡ ಸಾಹಿತ್ಯ ಪರಿಷತ್ತಿ"ನವರು 'ಆದಿ

ಪುರಾಣ'ವೆಂಬ ಹೆಸರಿನಿಂದ ಅಚ್ಚುಮಾಡಿಸಿದ್ದಾರೆ]. ಈ 'ಚಾವುಂಡ ರಾಯ ಪುರಾಣ'ದ ಒಳಗನ್ನು ನೋಡಿದರೆ: ಋಷಭ, ಶಾಂತಿ, ನೇಮಿ ಮತ್ತು ಮಹಾವೀರ ಹೊರತಾಗಿ ಉಳಿದ ತೀರ್ಥಂಕರರ ಕತೆಯೆಲ್ಲ ಎರಡೆರಡು ಪುಟಗಳಲ್ಲಿ ಮುಗಿದುಹೋಗುತ್ತದೆ (ಅನುಬಂಧ ೨.). ಋಷ ಭನ ಚರಿತ್ರೆಗೆ ೧೨೨ ಪುಟ ಹಿಡಿದರೂ ಅದರಲ್ಲಿ ಮನುಗಳ ಕತೆ, ಋಷ ಭನ ಪೂರ್ವಜನ್ಮಕಥನ, ಭರತ ಬಾಹುಬಲಿಗಳ ಕತೆ ಮುಂತಾದ ಇತರ ಹಲವು ವಿಷಯುಗಳಿವೆ. ಶಾಂತಿ ತೀರ್ಥಂಕರನ ಕತೆ ಕೂಡ ಆ ಕಾಲ ದಲ್ಲಿ ಚಕ್ರವರ್ತಿಯಾಗಿದ್ದ ಅವನದೇ ಕತೆಯಿಂದ ಹಿಗ್ಗಿದೆ. ನೇಮಿಯ ಚರಿತ್ರೆ ಹನ್ನೆರಡನೆಯ ಚಕ್ರವರ್ತಿಯ ಹಾಗೂ ಒಂಭತ್ತನೆಯ ಬಲದೇವ ವಾಸುದೇವ ಪ್ರತಿವಾಸುದೇವರ ಕತೆಯಿಂದ ಹಿರಿದಾಗಿದೆ. ಹಾಗೆಯೇ ಮಹಾವೀರನ ಕತೆ ಕೂಡ ಜೀವಂಧರನ ಕತೆಯಿಂದ ಬೆಳೆದಿದೆ. ಹೀಗೆ ಈ ನಾಲ್ಕು ಚರಿತ್ರೆಗಳಲ್ಲಿಯೂ, ಅವುಗಳ ಪುಟಪ್ರಮಾಣವನ್ನು ಬೆಳೆ ಸುವ ಇತರ ಸಂಗತಿಗಳನ್ನು ಬೇರ್ಪಡಿಸಿದರೆ, ಋಷಭನು ಒಬ್ಬನದು ಹೊರತು ಮಿಕ್ಕವರೆಲ್ಲರ ಚರಿತ್ರೆಯೂ ಎರಡೆರಡು ಪುಟಗಳಲ್ಲಿ ಅಡಕ ವಾಗುತ್ತದೆ. ಎಂದರೆ, ತೀರ್ಥಂಕರರ ಚರಿತ್ರೆಯೆಲ್ಲ—ಭವಾವಳಿಗಳನ್ನು ಬಿಟ್ಟರೆ—ಒಂದೇ ಅಚ್ಚಿನಂತೆ ಕಾಣುತ್ತದೆ. ಋಷಭತೀರ್ಥಂಕರನ ಚರಿತ್ರೆ ಯನ್ನು ಓದಿದನಂತರ, ಮುಂದಿನ ಆ ಆ ತೀರ್ಥಂಕರರಿಗೆ ಸಂಬಂಧಿಸಿದ ತಂದೆ ತಾಯಿ ವಂಶ ಜನ್ಮಸ್ಥಲಗಳ ಹೆಸರನ್ನೂ ಎತ್ತರ ಮೈಬಣ್ಣ ಆಯುಸ್ಸು ಲಾಂಛನ ಜನ್ಮನಕ್ಷತ್ರಗಳನ್ನೂ ಗಣಧರರ ಸಂಖ್ಯೆ ನಿರ್ವಾಣ ಸ್ಥಾನಗಳನ್ನೂ ಇತರ ಸಣ್ಣ ವ್ಯತ್ಯಾಸಗಳನ್ನೂ (ಅನುಬಂಧ ೫.) ಅಲ್ಲಲ್ಲಿಗೆ ಜೋಡಿಸಿಕೊಂಡರೆ ಆ ಆ ತೀರ್ಥಂಕರನ ಜೀವನ ಕತೆ ದೊರಕಿದಂತಾಗು ವುದು. ಇದಲ್ಲದೆ ಉಳಿದುದೆಲ್ಲ ಒಂದೇ ಬಗೆ. ಹೇಗೆಂದರೆ:

(೧) ತೀರ್ಥಂಕರನ ಜೀವ ಅನೇಕ ಭವಗಳಲ್ಲಿ ತಿರುಗಿ ಸುಕರ್ಮ ದಿಂದ ಉತ್ತಮಗೊಂಡು, ತೀರ್ಥಂಕರ ಪುಣ್ಯವನ್ನು ನಡಸಿ, ತಾನು ತೀರ್ಥಂ ಕರನಾಗುವ ಕಾಲವನ್ನು ಕಾಯುತ್ತ ಸ್ವರ್ಗದಲ್ಲಿರುವುದು. (೨) ಆ ಜೀವ ತಾನು ಹುಟ್ಟಬೇಕಾದ ಕ್ಷತ್ರಿಯಾಣಿಯ ಗರ್ಭಕ್ಕೆ ಅವತರಿಸುವು

ದಕ್ಕೆ ಆರು ತಿಂಗಳು ಮುಂಚಿನಿಂದ ಆ ಕ್ಷತ್ರಿಯಾಣಿಯ ಕ್ಷತ್ರಿಯನ ರಾಜ್ಯ ದಲ್ಲಿ ದಿನಕ್ಕೆ ಮೂರು ಬಾರಿಯಂತೆ ಆರು ತಿಂಗಳ ಕಾಲ ಕುಬೇರನು ಇಂದ್ರನ ಆಜ್ಞೆಯಂತೆ ಚಿನ್ನದ ಮಳೆ ಕರೆಯುವನು. (೩) ಆರು ತಿಂಗಳನಂತರ ತೀರ್ಥಂಕರನ ತಾಯಿಯಾಗುವ ಕ್ಷತ್ರಿಯಾಣಿಯ ಗರ್ಭ ಶೋಧನೆಗಾಗಿ ಇಂದ್ರನು ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿಯ ರೆಂಬ ದೇವಿಯರನ್ನು ಕಳುಹಿಸುವನು. ತೀರ್ಥಂಕರನ ತಾಯಿ ಹದಿನಾರು ಶುಭಸ್ವಪ್ನಗಳನ್ನು ಕಾಣುವಳು. ಆಕೆಯ ಗರ್ಭಕ್ಕೆ ತೀರ್ಥಂಕರನ ಅವ ತಾರವಾಗುವುದು. ಸೌಧರ್ಮೇಂದ್ರನು ಸಮಸ್ತ ದೇವನಿಕಾಯದೊಡನೆ ಬಂದು ತೀರ್ಥಂಕರನ ಅವತಾರಕಲ್ಯಾಣವನ್ನು ಸಂಭ್ರಮದಿಂದ ನೆರವೇರಿ ಸುವನು. (೪) ಒಂಬತ್ತು ತಿಂಗಳನಂತರ ತೀರ್ಥಂಕರನು ಮತಿ ಶ್ರುತಿ ಅವಧಿಯೆಂಬ ಮೂರು ತೆರದ ಜ್ಞಾನದೊಡನೆ ಜನಿಸುವನು. ಇಂದ್ರನು, ಇಂದ್ರಾಣಿಯಿಂದ ಜಿನಬಾಲಕನನ್ನು ತರಿಸಿಕೊಂಡು ಜನ್ಮಕಲ್ಯಾಣವನ್ನು ನೆರವೇರಿಸುವನು. (೫) ಜಿನಬಾಲಕನು ಯೌವನವನ್ನು ದಾಟಿ,* ವಿರಕ್ತಿಯಿಂದ ಗೃಹತ್ಯಾಗ ಮಾಡುವಾಗ ಇಂದ್ರನು ಆತನಿಗೆ ಪರಿ ನಿಷ್ಕ್ರಮಣ ಕಲ್ಯಾಣವನ್ನು ನಡಸುವನು. (೬) ತೀರ್ಥಂಕರನು ಕೆಲ ಕಾಲ ತಪಸ್ಸು ಮಾಡಿ, ಮನಃಪರ್ಯಯವೆಂಬ ನಾಲ್ಕನೆಯ ಜ್ಞಾನವನ್ನು ಪಡೆಯುವನು. (೭) ತೀರ್ಥಂಕರನು ಮೊದಲನೆಯ ಭಿಕ್ಷೆ ಸ್ವೀಕರಿಸು ವನು: ಆಗ ಪಂಚಾಶ್ಚರ್ಯವಾಗುವುದು. (೮) ಪುನಃ ತಪಸ್ಸಿಗೆ ತೊಡಗಿ ತೀರ್ಥಂಕರನು ಕರ್ಮಕ್ಷಯ ಮಾಡಿಕೊಂಡು ಕೇವಲಜ್ಞಾನ ಪಡೆಯು ವನು. ಇಂದ್ರನು ಕೇವಲಜ್ಞಾನ ಕಲ್ಯಾಣವನ್ನು ನೆರವೇರಿಸುವನು. ಕುಬೇರನು ಸಮವಸರಣ ಮಂಟಪವನ್ನು ರಚಿಸುವನು. (೯) ತೀರ್ಥಂಕ ರನು ಧರ್ಮೋಪದೇಶಮಾಡುತ್ತ ವಿಹಾರಿಸಿ, ಕೊನೆಗೆ ಮುಕ್ತಿ ಹೊಂದು ವನು. ಇಂದ್ರನು ಆತನ ಪರಿನಿರ್ವಾಣ ಕಲ್ಯಾಣವನ್ನು ನೆರವೇರಿಸು ವನು.

---

* ತೀರ್ಥಂಕರರಲ್ಲಿ ವಾಸುಪೂಜ್ಯ, ಮಲ್ಲಿ, ನೇಮಿ, ಪಾರ್ಶ್ವ ಮತ್ತು ವರ್ಧ ಮಾನರು ವಿವಾಹವಾಗಲಿಲ್ಲ. ಉಳಿದವರಿಗೆ ವಿವಾಹವಾಗಿತ್ತು.

೨೪ ತೀರ್ಥಂಕರರಿಗೂ ಸಮಾನವಾದ, ನಿತ್ಯವಾದ ಈ ರೀತಿಯ ಪಂಚ ಕಲ್ಯಾಣಗಳನ್ನೂ ಇತರ ಆಶ್ಚರ್ಯಗಳನ್ನೂ* ನನ್ನ "ಭಗವಾನ್ ಮಹಾವೀರ" ದಲ್ಲಿ ಸವಿಸ್ತಾರವಾಗಿ ಕಾಣಬಹುದು.

ಹೀಗೆ ತೀರ್ಥಂಕರರ ಕತೆಯೆಲ್ಲ ಒಂದು ಅಚ್ಚಿಗೆ ಬೀಳುವಂತೆ ಚಕ್ರ ವರ್ತಿಗಳ ಕತೆಯೆಲ್ಲ ಇನ್ನೊಂದು ಅಚ್ಚಿಗೆ ಬೀಳುತ್ತದೆ. ನಾರಾಯಣ ವಾಸುದೇವ ಪ್ರತಿವಾಸುದೇವರದೂ ಅಷ್ಟೆ. ಪಂಪನ ಒಂದು "ಆದಿ ಪುರಾಣ" ಓದಿದರೆ ತೀರ್ಥಂಕರರ ಮತ್ತು ಚಕ್ರವರ್ತಿಗಳ ಕತೆಯ ಸ್ವರೂಪ ಸ್ಪಷ್ಟವಾಗುತ್ತದೆ. ನಾಗಚಂದ್ರನ ಒಂದು "ಪಂಪರಾಮಾ ಯಣ" ಓದಿದರೆ ನಾರಾಯಣ ವಾಸುದೇವ ಪ್ರತಿವಾಸುದೇವರ ಹೋರಾ ಟದ ಬಗೆ ತಿಳಿಯುತ್ತದೆ. ಮಿಕ್ಕವು ಇವುಗಳ ಮಾದರಿಯೆಂದು ಲೆಕ್ಕಿಸ ಬಹುದು.

ಪಂಪ ತನ್ನ "ಆದಿಪುರಾಣ" ವನ್ನು "ಅಪರಿಮಿತ ಭಕ್ತಿಯಿ ವಿರಚಿಸುವೆಂ" ಎಂದು ಹೇಳಿ

ಇದುವೆ ಸುಕವಿಪ್ರಮೋದ
ಪ್ರದಮಿದುವೆ ಸಮಸ್ತಭವ್ಯಲೋಕಪ್ರಮುದ
ಪ್ರದಮೆನೆ ನೆಗಳ್ದಾದಿಪುರಾ
ಣದೊಳರಿವುದು ಕಾವ್ಯಧರ್ಮಮುಂ ಧರ್ಮಮುಮಂ

ಎಂದು ಕೃತಿ ರಚಿಸಿದ. ಪಂಪನಂತೆಯೇ ಇನ್ನೂ ಇತರ ಜೈನಕವಿಗಳ ಇತರ ತೀರ್ಥಂಕರರ ಚರಿತ್ರೆಯನ್ನೂ "ಅಪರಿಮಿತ ಭಕ್ತಿ"ಯಿಂದ ಬ ದರು, ನಿಜ. ಆದರೆ ಪಂಪನನ್ನು ಓದಿದನಂತರ ಅವುಗಳನ್ನು ಓ ಬೇಕಾದರೆ ಆ ಮತಸ್ಥರಲ್ಲದ ಇತರ ವಾಚಕರಿಗೆ ಸ್ವಲ್ಪ ಕಷ್ಟ.

ಇದುವರೆಗೆ ಕನ್ನಡದಲ್ಲಿ ಸಿಕ್ಕಿರುವ, ಕೇಳಿಬಂದಿರುವ, ಜೈನ ಪುರಾ ಗಳನ್ನು ನೋಡಿದರೆ (ಅನುಬಂಧ ೧), ನಮ್ಮ ಕವಿಗಳು ಕೇವ

* ಇವುಗಳಲ್ಲದ ಇತರ ಸಣ್ಣಪುಟ್ಟ ವ್ಯತ್ಯಾಸಗಳಿಗೆ ಮುಂದೆ ಬರು **"ಜೈನರ ಅರುವತ್ತು ಮೂವರು"** ಎಂಬ ಪುಸ್ತಕ ನೋಡಬಹುದು.

ಹನ್ನೊಂದು ತೀರ್ಥಂಕರರನ್ನು ಮಾತ್ರ ಆರಿಸಿಕೊಂಡಂತೆ ಕಾಣುತ್ತದೆ. ಉಳಿದ ಹದಿಮೂವರನ್ನು ಕುರಿತು ಹಾಡದಿರಲು — ಅವರ ಜೀವನ ಚರಿತೆಯ ವಸ್ತು ಹದಿನಾಲ್ಕು ಅಥವಾ ಹದಿನಾರು ಆಶ್ವಾಸಗಳ ಕಾವ್ಯಕ್ಕೆ ಸಾಲದೆಂಬುದೂ ಒಂದು ಕಾರಣವಿದ್ದಿರಬಹುದು.

ಮದರಾಸು ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ ಗುಣವರ್ಮನ "ಪುಷ್ಪದಂತ ಪುರಾಣ"ದ ಸಂಪಾದಕರು ಮುನ್ನುಡಿಯ ii ನೆಯ ಪುಟದಲ್ಲಿ ಹೇಳಿರುವ

> "ಕಥಾಭಾಗವೇ ಇಲ್ಲವೆಂದು ಹೇಳುವಷ್ಟು ಅತ್ಯಲ್ಪವಾದ ಈ ಕಥೆಯನ್ನು ಬೆಳೆಯಿಸಿ ಪಂಪಾದಿ ಕವಿಗಳ ಗ್ರಂಥಕ್ಕೆ ಯಾವ ಭಾಗದಲ್ಲಿಯೂ ಕಡಿಮೆಯಾಗಿಲ್ಲವೆನ್ನುವಂತೆ ಹದಿನಾಲ್ಕಾಶ್ವಾಸಗಳುಳ್ಳ ದೊಡ್ಡ ಕಾವ್ಯವನ್ನಾಗಿ ಹೊಸೆದಿರುವ ಈ ಕವಿಯ ಬುದ್ಧಿಚಾತುರ್ಯವು ಶ್ಲಾಘನೀಯವಾದುದೇ ಸರಿ"

ಎಂಬ ಮಾತು ನಮ್ಮಲ್ಲಿನ ಪುರಾಣಗಳಲ್ಲಿ ಹಲವಕ್ಕೆ ಸಲ್ಲುತ್ತವೆ. ಬೇರೆ ಯಾವ ಗುಣದಿಂದ ಪಂಪನ ಸರಿಸಮಕ್ಕೆ ಏಳದಿದ್ದರೂ 'ಅತ್ಯಲ್ಪವಾದ ಕತೆಯನ್ನು' ಹದಿನಾಲ್ಕು (ಅಥವಾ ಹದಿನಾರು) ಆಶ್ವಾಸಗಳ ದೊಡ್ಡ ಕಾವ್ಯವನ್ನಾಗಿ ಬೆಳೆಸುವ ಬುದ್ಧಿಚಾತುರ್ಯ ನಮ್ಮ ಅನೇಕ ಕವಿಗಳಿಗೆ ಸಹಜಗುಣ. ಇವರ ಈ ಬೆಳೆಸುವ ಕ್ರಮ ಹೇಗೆಂಬುದನ್ನು (ಅನುಬಂಧ ೩) ರಲ್ಲಿ ಕಾಣಬಹುದು.

ಈ ಪುರಾಣಗಳ ಒಳಗನ್ನು ಕತೆ ಮತ್ತು ವರ್ಣನೆ ಎಂದು ಎರಡು ವಿಭಾಗ ಮಾಡಬಹುದು. ಕತೆಯಲ್ಲಿ (೧) ತೀರ್ಥಂಕರನ ಭವಾವಳಿ, (೨) ತೀರ್ಥಂಕರನ ಪಂಚಕಲ್ಯಾಣ, (೩) ಆ ತೀರ್ಥಂಕರನ ಕಾಲದ ಚಕ್ರವರ್ತಿ ಮುಂತಾದವರ ಕತೆ—ಎಂದು ಮೂರು ಭಾಗ ಮಾಡಬಹುದು. ಇದರಲ್ಲಿ ಮೊದಲ ಎರಡು ಜೈನಪುರಾಣಕ್ಕೆ ನಿತ್ಯ, ಮೂರನೆಯದು ವಿಕಲ್ಪ. ವರ್ಣನೆಯಲ್ಲಿ ಪುರಾಣದ ಅಷ್ಟಾಂಗಗಳೂ (ಅನುಬಂಧ ೪), ಕಾವ್ಯದ ಅಷ್ಟಾದಶ ವರ್ಣನೆಗಳೂ (ಅನುಬಂಧ ೪) ಬರುತ್ತವೆ. ಈ ವರ್ಣನೆಯಲ್ಲಿ ಕವಿ ಏನಾದರೂ ತನ್ನ ಸ್ವಾತಂತ್ರ್ಯವನ್ನು ತೋರಿಸಬಹುದೇ ಹೊರತು ಪುರಾಣದ ಕತೆಯಲ್ಲಿ ಅವನು ಕೈಯಾಡಿಸುವಂತಿಲ್ಲ. ಆದ್ದರಿಂದ

ಗ್ರಂಥವನ್ನು ಬೆಳೆಸುವುದಕ್ಕೆ ಮೋಪಾಗಿ ಸಿಕ್ಕತಕ್ಕದ್ದು ವರ್ಣನೆ ಮಾತ್ರ. ಆದರೆ ಸಂಪ್ರದಾಯ ಶರಣರಾಗಿ ಕೇವಲ ಕವಿಸಮಯವನ್ನು ಆಶ್ರಯಿಸಿದ ನಮ್ಮ ಅನೇಕ ಕವಿಗಳ ವರ್ಣನೆಯಿಂದ ಕಾವ್ಯಕ್ಕೆ ಏನು ಕಳೆ ಕಟ್ಟುವು ದೆಂಬುದನ್ನು ಇಲ್ಲಿ ವಿವರಿಸಬೇಕಾದುದಿಲ್ಲ. ಜೈನಪುರಾಣಗಳಲ್ಲಿ "ಧರ್ಮ" ವನ್ನೂ "ಕಾವ್ಯಧರ್ಮ"ವನ್ನೂ ಪಂಪನಂತೆ ಪ್ರತಿಪಾದಿಸಿದವರೇ ಇಲ್ಲವೆನ್ನಬಹುದು.

ಕಥಾಭಾಗವಲ್ಲಿ ಕವಿ ಸ್ವಾತಂತ್ರ್ಯ ವಹಿಸಲಾರನೆಂದು ಮೇಲೆ ಹೇಳಿತು. ಅಲ್ಲದೆ ತೀರ್ಥಂಕರರ ಕತೆಗಳು ಸುಮಾರು ಒಂದೇ ಅಚ್ಚಿನಂತೆ ಕಾಣುವುವೆಂದೂ ಹಿಂದೆಯೇ ಹೇಳಿತು. ಆದ್ದರಿಂದ ಜೈನ ಪುರಾಣಗಳಲ್ಲಿ ವೈವಿಧ್ಯ ಸಿಕ್ಕಬೇಕಾದರೆ ಅದು ತೀರ್ಥಂಕರರ ಭವಾವಳಿಯಲ್ಲಿ ಮಾತ್ರ. ಚಾವುಂಡರಾಯ ಪುರಾಣದ ಆಧಾರ ಹಿಡಿದರೆ, ಈ ಭವಾವಳಿಯು ವಿವರ ವಾಗಿ ದೊರಕುವುದು ಕೆಲವು ತೀರ್ಥಂಕರರಿಗೆ ಮಾತ್ರ; ಉಳಿದವರದು ಮೂರು ನಾಲ್ಕು ಪಂಕ್ತಿಗಳಲ್ಲಿ ಮುಗಿಯುವುದು.

ಮೇಲೆ ಹೇಳಿದ "ಪುಷ್ಪದಂತ ಪುರಾಣ"ದ ಮುನ್ನುಡಿಯಲ್ಲಿ

> "ಈ ಪುರಾಣದ ಕಥಾ ಭಾಗವು ಆದಿಪುರಾಣ ಶಾಂತಿಪುರಾಣಗಳ ಕಥಾಭಾಗದಂತೆ ಹಲವು ಜನ್ಮಾಂತರ ಕಥಾ ಶೃಂಖಲೆಗಳ ತೊಡಕಿನಿಂದ ವಾಚಕರ ಮನಸ್ಸಿಗೆ ಬೇಸರವನ್ನು ಹುಟ್ಟಿಸುವಂತಿಲ್ಲ."

ಎಂದು ಹೇಳಿರುವ ಮಾತು ನಿಜ. ಏಕೆಂದರೆ, ಪುಷ್ಪದಂತನ ಭವಾವಳಿಯ ವಿಷಯದಲ್ಲಿ ಹೆಚ್ಚು ವಿವರ ಗೊತ್ತಿಲ್ಲ. ಆದರೂ ಕವಿ ತನ್ನ ಕಾವ್ಯವನ್ನು ಹದಿನಾಲ್ಕು ಆಶ್ವಾಸ ಬೆಳೆಸಬೇಕಾಗಿ ಬಂದ ಕಾರಣದಿಂದ ವರ್ಣನೆಗಳಿಗೆ ಎಂಟು ಆಶ್ವಾಸವನ್ನೂ ಪಂಚ ಕಲ್ಯಾಣಗಳಿಗೆ ಆರು ಆಶ್ವಾಸಗಳನ್ನೂ ಉಪಯೋಗಿಸಿಕೊಂಡು ಒಟ್ಟು ಹದಿನಾಲ್ಕು ಆಶ್ವಾಸ ಮಾಡಿದ್ದಾನೆ.

ಮೇಲೆ ಉದ್ಧರಿಸಿರುವ ಮುನ್ನುಡಿಯ ಮಾತಿನಂತೆ ಜೈನ ಪುರಾಣ ಗಳ ಜನ್ಮಾಂತರ ಕಥಾ ಶೃಂಖಲೆಗಳ ತೊಡಕಿನಿಂದ ವಾಚಕರ ಮನಸ್ಸಿಗೆ ಬೇಸರ ಹುಟ್ಟುವುದು ನಿಜವಾದರೂ, ಪುರಾಣಗಳ ಸಾರವಾದ ಅಂಶ

ನೆಂದರೆ ಈ ಜನ್ಮಾಂತರ ಕತೆಗಳೇ. ಏಕೆಂದರೆ: ತೀರ್ಥಂಕರರ ಜೀವನ ಚರಿತ್ರೆಯನ್ನು ನಾವು ತಿಳಿಯಬಯಸಿದರೆ ನಮಗಿರುವ ಒಂದೇ ಸಾಧನ —ಈ ತೀರ್ಥಂಕರ ಪುರಾಣಗಳು. ಇವುಗಳಲ್ಲಿ ತೀರ್ಥಂಕರರ ಸದ್ಯದ ಕತೆ ಕೇವಲ ಪಂಚಕಲ್ಯಾಣಗಳಲ್ಲಿ ಮೊದಲುಗೊಂಡು ಕೊನೆಯಾಗಿ ಇಪ್ಪತ್ತುನಾಲ್ವರಿಗೂ ಸಮಾನವಾಗಿರುತ್ತದೆ. ಆದರೆ ಪೂರ್ವಜನ್ಮದ ಕತೆ ಮಾತ್ರ ಪ್ರತಿಯೊಬ್ಬರದೂ ಬೇರೆ ಬೇರೆ. ಆದರೂ, ಈ ಕತೆಗಳು ತೀರ್ಥಂಕರರ ಜೀವನಚರಿತ್ರೆಯ ಅಂಶಗಳೆಂದು ಭಾವಿಸುವುದಕ್ಕಿಂತ, ಈ ಕತೆಗಳು ಜೈನಧರ್ಮವನ್ನು ಜನಸಾಮಾನ್ಯಕ್ಕೆ ಸ್ಪಷ್ಟಗೊಳಿಸುವ ಸುಂದರ ವಾದ ಉದಾಹರಣೆಗಳೆಂದು ಭಾವಿಸಬಹುದು. ಹೇಗೆಂದರೆ:

ಜೀವ ಎಣಿಕೆಗೆ ಎಟುಕದ ಕಾಲದಿಂದ ಅಜೀವದೊಡನೆ ಕೂಡಿ, ಕರ್ಮ ಮಾಡಿ ಆ ಕರ್ಮದ ಫಲವನ್ನು ಅನುಭವಿಸುತ್ತ ಸಂಸಾರದಲ್ಲಿ ಸುತ್ತಾಡುತ್ತಿರುತ್ತದೆ. ಮನುಷ್ಯಜನ್ಮತಾಳಿದ ಜೀವ ಸ್ವಲ್ಪ ಪಾಪಮಾಡಿದರೆ ತಿರ್ಯಕ್ಕಾಗಿ ಜನಿಸುತ್ತದೆ; ಹೆಚ್ಚು ಪಾಪ ಮಾಡಿದರೆ ನರಕಕ್ಕೆ ಹೋಗುತ್ತದೆ. ಆ ತಿರ್ಯಕ್ಕು ಪಾಪದಿಂದ ನರಕಕ್ಕಿಳಿಯಬಹುದು; ಸ್ವಲ್ಪ ಪುಣ್ಯಮಾಡಿ ಮನುಷ್ಯನಾಗಬಹುದು, ಅಥವಾ ಹೆಚ್ಚು ಪುಣ್ಯದಿಂದ ದೇವತೆಯಾಗಬಹುದು. ನರಕ ಸ್ವರ್ಗಗಳಲ್ಲಿ ಹುಟ್ಟಿದ ಜೀವ ಅಲ್ಲಿ ತನ್ನ ಕಾಲ ಮುಗಿದ ನಂತರ ಪುನಃ ಭೂಮಿಯಲ್ಲಿ ಹುಟ್ಟುವುದು. ಅಲ್ಲಿ ಮಾಡುವ ಕರ್ಮಕ್ಕನುಸಾರವಾಗಿ ಪುನಃ ನರಕಸ್ವರ್ಗಗಳನ್ನು ಪಡೆಯುವುದು. ಹೀಗೆ ಕರ್ಮ ಮಾಡುತ್ತಿರುವ ವರೆಗೆ ಜೀವ ಅನಂತವಾಗಿ ಮಾನುಷ ತಿರ್ಯಕ್ ದೇವ ನಾರಕಗಳೆಂಬ ನಾಲ್ಕು ಗತಿಗಳಲ್ಲಿ ಭ್ರಮಿಸುವುದು. ಆದರೆ ಸಮ್ಯಕ್ ದರ್ಶನ ಜ್ಞಾನ ಚಾರಿತ್ರಗಳೆಂಬ ರತ್ನತ್ರಯವನ್ನು ಆಶ್ರಯಿಸಿ ನಡೆದಾಗ, ಜೀವ ತನ್ನನ್ನು ತಾನು ಉತ್ತಮಪಡಿಸಿಕೊಂಡು ತನ್ನ ಸಹಜಗತಿಯಾದ ಊರ್ಧ್ವಗತಿಗೆ ಮುಖಮಾಡುವುದು. ಆಗ ಕೇವಲ ದೇವಮಾನುಷಗತಿಗಳಲ್ಲಿ ಮಾತ್ರ ಓಡಿಯಾಡಿ, ಕಡೆಗೆ ಒಮ್ಮೆ ಮನುಷ್ಯಜನ್ಮದಲ್ಲಿ ಎಂಟು ಕರ್ಮಗಳನ್ನೂ ಕ್ಷಯಗೊಳಿಸಿ, ಪಂಚಮಗತಿಯೆನಿಸಿದ ಮೋಕ್ಷವನ್ನು ಪಡೆದು ಸಿದ್ಧನಾಗುವುದು. ಅಂದಿನಿಂದ ಆ ಜೀವ ಮುಕ್ತ, ಅದಕ್ಕೆ

ಸಂಸಾರವಿಲ್ಲ. ಈ ರೀತಿಯ ಸಿದ್ಧಪದವಿಗೆ ಅರ್ಹತೆ ಪಡೆಯುತ್ತಿದ್ದ ಜೀವ ಹಿಂದಿನ ಮನುಷ್ಯಜನ್ಮದಲ್ಲಿ ತೀರ್ಥಂಕರ ಪುಣ್ಯವನ್ನು ಗಳಿಸಿದ್ದರೆ, ಆ ಜೀವ ತನ್ನ ಕಡೆಯ ಜನ್ಮದಲ್ಲಿ ತೀರ್ಥಂಕರನಾಗಿ, ಲೋಕ ಕಲ್ಯಾಣ ಮಾಡಿ, ಮುಕ್ತಿಹೊಂದುವುದು. ಇದು ಜೈನ ಧರ್ಮದ ಸಾರಾಂಶ, ಇದನ್ನೇ ಜೈನ ಪುರಾಣಗಳು ದೃಷ್ಟಾಂತದಿಂದ ಬೋಧಿಸುವುದು.

ಈ ದೃಷ್ಟಾಂತಗಳಲ್ಲೆಲ್ಲ ಬಹು ಸುಂದರವಾದುದು ಪಾರ್ಶ್ವನಾಥ ನದು. ಜೈನಧರ್ಮದ ಆಶ್ರಯದಿಂದ ಒಂದು ಜೀವ ಹೇಗೆ ತಾನು ಕ್ರಮೇಣ ಉತ್ತಮಗೊಂಡು ಕಡೆಯಲ್ಲಿ ಸಾಕ್ಷಾತ್ ತೀರ್ಥಂಕರ ನಾಯಿತು, ಅದರ ಒಡಹುಟ್ಟಿದ ಇನ್ನೊಂದು ಜೀವ ಆ ಧರ್ಮವಿಲ್ಲದೆ ಹೇಗೆ ಪುನಃಪುನಃ ಕುಯೋನಿಯಲ್ಲಿ ಬರುತ್ತಿತ್ತು, ಹಾಗೆ ಬರುತ್ತ ಕಟ್ಟ ಕಡೆಗೆ ತೀರ್ಥಂಕರನ ಸನ್ನಿಧಿಯ ಮಹಿಮೆಯಿಂದ ಪಶ್ಚಾತ್ತಾಪಗೊಂಡು ಹೇಗೆ ಉತ್ತಮ ಪದವಿಗೆ ಏರಿತು—ಎಂಬುದನ್ನು ಈ ಕತೆ ಬಹು ಹೃದ ಯಂಗಮವಾಗಿ ನಿರೂಪಿಸುತ್ತದೆ.

ಆದೇ ಕತೆಯನ್ನು ಮುಂದೆ ಕೊಟ್ಟಿದೆ.

ಜೈನ ಪುರಾಣ ಪರಂಪರೆ

ಶ್ರೀ ವೃಷಭ ಜಿನೇಂದ್ರಾದಿ ಮ
ಹಾವೀರ ಜಿನಾಂತರಾದ ಜಿನಪತಿಗಳ್ ಭ।
ವ್ಯಾವಳಿಗೆ ಚತುರ್ವಿಂಶತಿ
ದೇವರ್ ದಯೆಗೆಯ್ಗೆ ವಿಮಲ ರತ್ನತ್ರಯಮಂ॥

ಎಲ್ಲಾ ಪ್ರಾಣಿಗಳೂ ಆತ್ಯಂತಿಕ ಸುಖವನ್ನು ಇಚ್ಛೈಸುವವರೆ. ಆ ಸುಖ ಕರ್ಮಕ್ಷಯದಿಂದ ಅಲ್ಲದೆ ಆಗದು. ಕರ್ಮಕ್ಷಯಕ್ಕೆ ಹಲವು ಕಾರಣ ಇವೆಯಾದರೂ ಮುಖ್ಯಕಾರಣ ಸಮ್ಯಕ್ತ್ವ. ಸಮ್ಯಕ್ತ್ವ ಮೊದಲಾದ ಗುಣಗಳಿಗೆ ಹೇತು '**ಪ್ರಥಮಾನುಯೋಗ**'. ಈ ಪ್ರಥಮಾನುಯೋಗವನ್ನು ಮೊದಲು ಭರತಚಕ್ರವರ್ತಿಯು ಕೈಲಾಸಪರ್ವತದಲ್ಲಿದ್ದ ಆದಿಬ್ರಹ್ಮನಿಂದ ಕೇಳಿದನು. ಜಗತ್ತ್ರಯಸ್ವಾಮಿಯೂ ಕಾಲತ್ರಯವೇದಿಯೂ ಭುವನತ್ರಯೈಕಬಂಧುವೂ ಆದ ಆದಿಬ್ರಹ್ಮನು ಮೊದಲಿನ ಉತ್ಸರ್ಪಿಣಿಯೆಂಬ ಕಾಲದ ಇತಿಹಾಸ ಪುರಾಣಗಳನ್ನು ತಿಳಿಸಿದನು. ಭರತೇಶನು ಅದನ್ನು ಕೇಳಿ, ಕೈಮುಗಿದು "ವೃಷಭೇಶ್ವರ, ಅವಸರ್ಪಿಣಿಯಲ್ಲಿ ಜಿನರು ಎಷ್ಟು ಮಂದಿ? ಚಕ್ರವರ್ತಿಗಳು ಎಷ್ಟು? ಬಲದೇವರು, ವಾಸುದೇವರು, ಪ್ರತಿವಾಸುದೇವರು ಎಷ್ಟು? ತಿಳಿಸು" ಎಂದು ಬೇಡಿದಾಗ ಆದಿದೇವನು ಸರ್ವಭಾಷಾಸ್ವಭಾವಕವಾದ ದಿವ್ಯಧ್ವನಿಯಿಂದ ಅಪ್ಪಣೆ ಕೊಡಿಸಿದನು. ಅದನ್ನು ಸ್ವಾಮಿಯ ಗಣಧರನಾದ ವೃಷಭಸೇನನು ಅರ್ಥಪೂರ್ವಕವಾಗಿ ಭರತನಿಗೆ ವಿವರಿಸಿದನು.

ಆದಿನಾಥನ ಬಳಿಕ ಅಜಿತನಾಥ ಮೊದಲಾದ ಇಪ್ಪತ್ತುಮೂವರು ತೀರ್ಥಂಕರರು ಬಂದರು. ಆಯಾ ಕಾಲದ ತೀರ್ಥಕರಕ್ಷತ್ರಿಯರು ಆಯಾ ತೀರ್ಥಂಕರರ ಸಮವಸರಣವೆಂಬ ಧರ್ಮಸಭೆಯಲ್ಲಿ ಭರತನಂತೆಯೇ ಅವಸರ್ಪಿಣೀಕಾಲದ ಜಿನರ, ಚಕ್ರವರ್ತಿಗಳ, ಬಲದೇವ ವಾಸುದೇವ ಪ್ರತಿವಾಸುದೇವರ ಇತಿಹಾಸ ಪುರಾಣಗಳನ್ನು ಬೆಸಗೊಂಡಾಗ, ಆಯಾ ತೀರ್ಥಂಕರರ ಗಣಧರರು ಆಯಾ ತೀರ್ಥಕರಕ್ಷತ್ರಿ

ಯರಿಗೆ, ಮೊದಲು ಆದೀಶ್ವರನ ಗಣಧರನು ಭರತನಿಗೆ ತಿಳಿಸಿದಂತೆಯೇ, ತಿಳಿಸಿದರು. ಈ ಪರಂಪರೆಯಲ್ಲಿ ಕಡೆಯ ತೀರ್ಥಂಕರ ಮಹಾವೀರನೆನಿಸಿದ ಶ್ರೀ ವರ್ಧಮಾನಸ್ವಾಮಿ; ಆ ಕಾಲದ ತೀರ್ಥಕರಕ್ಷತ್ರಿಯ ಶ್ರೇಣಿಕ ಮಹಾರಾಜ; ಆತನಿಗೆ ಧರ್ಮೋಪದೇಶ ಮಾಡಿದ ಮುಖ್ಯ ಗಣಧರ ಗೌತಮಸ್ವಾಮಿ.

ಹೀಗೆ, ಅವಸರ್ಪಿಣೀಕಾಲದ [೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲದೇವರು, ೯ ವಾಸುದೇವರು, ೯ ಪ್ರತಿವಾಸುದೇವರು –ಒಟ್ಟು ೬೩] ಅರವತ್ತುಮೂವರು ಜೈನಮಹಾಪುರುಷರ ಇತಿಹಾಸ ಪುರಾಣಗಳು ಆದಿನಾಥನ ಗಣಧರ ವೃಷಭಸೇನ ಮೊದಲಾಗಿ ಮಹಾವೀರನ ಗಣಧರ ಗೌತಮಸ್ವಾಮಿಯವರೆಗೆ ಲೋಕಕ್ಕೆ ಪ್ರಕಟವಾದುವು.

ಗೌತಮಸ್ವಾಮಿಯ ಬಳಿಕ ಆತನ ಸಧರ್ಮಿಯಾದ ಸುಧರ್ಮಾಚಾರ್ಯನೂ ಆ ಬಳಿಕ ಕೊನೆಯ ಶ್ರುತಕೇವಲಿಯಾದ ಜಂಬೂಸ್ವಾಮಿಯೂ ಆ ಸಮಸ್ತಪುರಾಣವನ್ನೂ ಇದ್ದಂತೆಯೇ ಸಂಗ್ರಹಿಸಿದರು. ಈ ಮೂವರೂ ಮಹಾವೀರನು ಮುಕ್ತಿಗೆ ಸಂದ (ಕ್ರಿ. ಪೂ. ೫೨೭) ಅರುವತ್ತೆರಡು ವರ್ಷಗಳ ಬಳಿಕ ಮುಕ್ತಿಪಡೆದರು.

ಆ ಬಳಿಕ, ನೂರುವರ್ಷಗಳ ಕಾಲ, ವಿಷ್ಣು, ನಂದಿಮಿತ್ರ, ಅಪರಾಜಿತ, ಗೋವರ್ಧನ, ಭದ್ರಬಾಹು ಎಂಬ ಐವರು ಶ್ರುತಕೇವಲಿಗಳು ಪುರಾಣವನ್ನು ಸಂಪೂರ್ಣವಾಗಿ ಪ್ರಕಟಪಡಿಸಿದರು. ಇವರು ಜೈನಾಗಮಗಳಾದ ೧೧ ಅಂಗಗಳಲ್ಲೂ ೧೪ ಪೂರ್ವಗಳಲ್ಲೂ ಪಾರಂಗತರಾಗಿದ್ದರು.

ಇವರಾದ ಮೇಲೆ, ವಿಶಾಖಾಚಾರ್ಯ, ಪ್ರೋಷ್ಠಿಲಾಚಾರ್ಯ, ಕ್ಷತ್ರಿಯಾಚಾರ್ಯ, ಜಯಾಚಾರ್ಯ, ನಾಗಸೇನ, ಸಿದ್ಧಾರ್ಥ, ಧೃತಿಷೇಣ, ವಿಜಯ, ಬುದ್ಧಿಮಾನ್, ಗಂಗದೇವ, ಧರ್ಮಸೇನ ಎಂಬ ಹನ್ನೊಂದು ಆಚಾರ್ಯರು, ೧೮೩ ವರ್ಷಗಳ ಕಾಲ ಪುರಾಣವನ್ನೆಲ್ಲ ತಿಳಿಸಿದರು. ಇವರು ೧೧ ಅಂಗಗಳ ಜೊತೆಗೆ ೧೦ ಪೂರ್ವಗಳನ್ನು ಮಾತ್ರ ತಿಳಿದಿದ್ದರು.

ಅನಂತರ, ಇನ್ನೂರಿಪ್ಪತ್ತು ವರ್ಷಗಳವರೆಗೆ, ನಕ್ಷತ್ರ, ಜಯಪಾಲ, ಪಾಂಡವ, ಧ್ರುವಸೇನ, ಕಂಸಾಚಾರ್ಯ ಎಂಬ ಐವರು ಮುನಿಗಳು ಮುಕ್ಕಾಲು ಪುರಾಣ ಮಾತ್ರ ಪ್ರಕಾಶಪಡಿಸಿದರು. ಈ ಆಚಾರ್ಯರು ೧೧ ಅಂಗಗಳನ್ನು ಮಾತ್ರ ಬಲ್ಲವರಾಗಿದ್ದರು.

ಹೀಗೆಯೇ ಬರುಬರುತ್ತ ಶಾಸ್ತ್ರವನ್ನು ನೆನಪಿಡುವ ಶಕ್ತಿ ಕಡಿಮೆಯಾಗುತ್ತ ಬಂತು. ಕಂಸಾಚಾರ್ಯರ ಬಳಿಕ ಸುಭದ್ರ, ಯಶೋಭದ್ರ, ಭದ್ರಬಾಹು ಮತ್ತು ಲೋಹಾಚಾರ್ಯರೆಂಬ ನಾಲ್ವರು ಮೊದಲ ಅಂಗ ಶಾಸ್ತ್ರಮಾತ್ರ ಬಲ್ಲವರು, ಪುರಾಣದಲ್ಲಿ ಒಂದು ಕಾಲು ಭಾಗವನ್ನು ಮಾತ್ರ ಪ್ರಕಾಶಪಡಿಸಿದರು. ಇನ್ನು ಮುಂದೆ ಶಾಸ್ತ್ರ ಇನ್ನೂ ಖಿಲವಾಗುತ್ತ ಹೋಯಿತು.

ಹೀಗೆಯೇ ಇರಲು, ಕ್ರಿ. ಶ. ೯ನೆಯ ಶತಮಾನದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷನಿಗೆ ಗುರುಗಳಾಗಿದ್ದ ಶ್ರೀ ಜಿನಸೇನಾಚಾರ್ಯರು ಪರಂಪರೆಯಿಂದ ಬಂದ ಪುರಾಣದ ಎಷ್ಟೆಷ್ಟು ಭಾಗವು ಲಬ್ಧವಾಗಿತ್ತೋ ಅಷ್ಟನ್ನು ಸಂಗ್ರಹಿಸಿ " ಪುರಾಣಂ ಸಂಗ್ರಹಿಷ್ಯಾಮಿ ತ್ರಿಷಷ್ಟಿಪುರುಷಾಶ್ರಿತಂ" ಎಂದು ಅರುವತ್ತುಮೂವರ **"ಮಹಾಪುರಾಣ"** ದ ರಚನೆಗೆ ತೊಡಗಿದರು. ಆದಿ ತೀರ್ಥಂಕರನ ಹಾಗೂ ಆದಿ ಚಕ್ರೇಶ್ವರನ ಪುರಾಣದಲ್ಲಿ ೪೨ ಪರ್ವಗಳನ್ನು ಮುಗಿಸುವ ವೇಳೆಗೆ ಜಿನಸೇನಾಚಾರ್ಯರು ಮುಗಿದರು. ಅವರು ಅರ್ಧದಲ್ಲಿ ಬಿಟ್ಟುದನ್ನು ಅವರ ಶಿಷ್ಯರಾದ ಗುಣಭದ್ರಾಚಾರ್ಯರು ಕಡೆಗಾಣಿಸಿದರು. ಗುರುಗಳು ಬರೆದ ೪೨ ಪರ್ವಗಳನ್ನು ಮುಂದುವರಿಸಿ ಆದಿನಾಥನ ಚರಿತೆಯನ್ನು ೪೭ ಪರ್ವಗಳಲ್ಲಿ ಪೂರೈಸಿದರು. ಇದೇ **"ಪೂರ್ವಪುರಾಣ"**. ಇದರ ಮುಂದಿನ **" ಉತ್ತರಪುರಾಣ "** ದಲ್ಲಿ ಉಳಿದ ೨೩ ತೀರ್ಥಂಕರರ, ಆಯಾ ತೀರ್ಥದ ಚಕ್ರವರ್ತಿಗಳ ಹಾಗೂ ಬಲದೇವ ವಾಸುದೇವ ಪ್ರತಿವಾಸುದೇವರ ಇತಿಹಾಸಗಳಿವೆ. ಈ " ಪೂರ್ವ " ಮತ್ತು " ಉತ್ತರ " ಪುರಾಣಗಳು ಕೂಡಿದುದೇ " ಮಹಾಪುರಾಣ ".

ಈ 'ಮಹಾಪುರಾಣ' ಜೈನರಿಗೆ ಪರಮಪೂಜ್ಯಗ್ರಂಥ. ಆದರೂ ಇದು ಜೈನರ ಮೊತ್ತಮೊದಲ ಪುರಾಣವಲ್ಲ. ಕವಿಪರಮೇಷ್ಠಿಯೆಂಬವರು

ಚತುರ್ವಿಂಶತಿತೀರ್ಥಂಕರ ಪುರಾಣವನ್ನು ಸಂಕ್ಷೇಪವಾಗಿ ರಚಿಸಿದ್ದರೆಂದು ಸ್ವಯಂ ಜಿನಸೇನಾಚಾರ್ಯರೇ ಹೇಳಿದ್ದಾರೆ. ಅಲ್ಲದೆ, ಕನ್ನಡದಲ್ಲಿ **“ತ್ರಿಷಷ್ಟಿಪುರುಷ ಪ್ರತಿಬದ್ಧ ಪುರಾಣ”** ವನ್ನು ಬರೆದ ಚಾವುಂಡ ರಾಯನೂ

ವಿರಚಿಸಿದರ್ ಮುನ್ನೆ ಮಹಾ
ಪುರಾಣಮುಂ ನೆಗೞ್ದ ಕೂಚಿಭಟ್ಟಾರಕರುಂ
ಪರಮ ಶ್ರೀನಂದಿ ಮುನೀ
ಶ್ವರರುಂ ತಪಸಂತರಂ ಜಿನಾಗಮತಿಲಕರ್

ಕವಿಪರಮೇಶ್ವರರ್ ಬರೆದುದಂ ಜಿನಸೇನ ಮಹಾಮುನೀಶರೀ
ಯುವಸಿಗೆ ಪೇೞ್ದು ಮಾಣೆ ಗುಣಭದ್ರಮುನೀಶ್ವರರೆಯ್ದೆ ಪೇೞ್ದು ಪ
ಲ್ಲವಿಸಿದುದಂ ತ್ರಿಷಷ್ಟಿಪುರುಷಪ್ರತಿಬದ್ಧ ಪುರಾಣಮಂ ಮಹೋ
ತ್ಸವದೊಳೆ ಭವ್ಯಕೋಟಿಗಳೊಳುಲ್ ಬರೆದಂ ಗುಣರತ್ನಭೂಷಣಂ

ಎಂದಿದ್ದಾನೆ. ಇವನಂತೆಯೇ, ಕನ್ನಡದಲ್ಲಿ ತೀರ್ಥಂಕರ ಪುರಾಣಗಳನ್ನು ರಚಿಸಿದವರು ಜಿನಸೇನ ಗುಣಭದ್ರರಿಗೆ ಋಣಿಗಳಾಗಿರುವರೆಂದು ಧಾರಾಳ ವಾಗಿ ಹೇಳಬಹುದು.

ಹೀಗೆ, ಜೈನರ ಅರುವತ್ತು ಮೂವರು ಮಹಾಪುರುಷರನ್ನು (ಅಥವಾ **ಶಲಾಕಾಪುರುಷರನ್ನು**) ತಿಳಿಸುವ ಪುರಾಣಕ್ಕೆ **“ಪೂರ್ವಾನು ಯೋಗ”** ವೆಂದೂ ಹೆಸರು. ಇದರಂತೆಯೇ ಮೂರು ಲೋಕಗಳ ಕ್ಷೇತ್ರಪರಿಮಾಣಗಳನ್ನು ತಿಳಿಸುವ ಸೂರ್ಯಪ್ರಜ್ಞಪ್ತಿ, ಚಂದ್ರಪ್ರಜ್ಞಪ್ತಿ, ಜಯಧವಳಾದಿಗಳಿಗೆ **“ಕರಣಾನುಯೋಗ”** ವೆಂದು ಹೆಸರು. ಮೂರ ನೆಯದಾದ **“ಚರಣಾನುಯೋಗ”** ದಲ್ಲಿ ಜೈನ ಮುನಿಗಳ, ಶ್ರಾವಕರ ಆಚಾರಶುದ್ಧಿ ವರ್ಣಿತವಾಗಿರುವುದು. ಕಡೆಯದಾದ **“ದ್ರವ್ಯಾನು ಯೋಗ”** ದಲ್ಲಿ ಜೀವಾದಿ ದ್ರವ್ಯಗಳ ವಿವರಣೆಯಿರುವುದು; ಉದಾ:- ತತ್ವಾರ್ಥಸೂತ್ರ, ಗೊಮ್ಮಟಸಾರ ಇತ್ಯಾದಿ., ಈ ಮೇಲೆ ಹೇಳಿದ ನಾಲ್ಕು ಅನುಯೋಗಗಳನ್ನೂ ಒಟ್ಟುಕೂಡಿಸಿ **“ಶ್ರುತಸ್ಕಂಧ”** ವೆಂದು ಜೈನರು ಕರೆಯುವರು.

ಅನುಯೋಗ ಕುಸುಮಪಾದಪ
ಮನೇಕ ನಯಲತಿಕಮಂಗ ಫಲಮಹಿಜಂ ಸ
ದ್ವನಜವನಮೆಮಗೆ ವಿಶ್ರಮ
ವನಮುಕ್ಕತಿ ವಿಶ್ರುತ ಶ್ರುತಸ್ಕಂಧವನಂ

ನೆಱಿವಂ ತಾಳ್ದಿದಪಾಸ್ತ ದುರ್ನಯ ತಮೋಬಂಧಂ ಶ್ರುತಸ್ಕಂಧಮಾ
ದಱುವಿಂದಂ ಗಣನಾಯಕರ್ಸವಱಿಂ ಭವ್ಯಶ್ರೇಣಿಗವ್ಯಾಜದಿಂ
ದಱುಯಲ್ಕಾಲ್ಕನುಯೋಗಮಾದುದದಱಿಂದೊಳ್ಪೂರ್ವಾನುಯೋಗಾಬ್ಧಿಯಿಂ
ಪೊಱಪೊಣ್ಮುತ್ತುದು ವೇಳೆಯಂತೆ ಕಥೆ ಲಂಪೋದ್ದಾಮ ವೀಚೀಚಯಂ

ಎಂದ ಪಂಪನ ಮಾತನ್ನು ಇಲ್ಲಿ ನೆನೆಯಬಹುದು. ಇವನಂತೆಯೇ ಇತರ ಕನ್ನಡ ಕವಿಗಳು ಕೂಡ ಸಂಪ್ರದಾಯವನ್ನು ಅನುಸರಿಸಿಯೇ ತಮ್ಮ ತೀರ್ಥಂಕರಪುರಾಣಗಳನ್ನು ಬರೆದರೆಂಬುದಕ್ಕೆ

ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ ಮಹಾ
ಷ್ಟಾಪದಶೈಲದೊಳ್ವಿಜಿತಘಾತಿಚತುಷ್ಟಯನತ್ಯುದಾರ ರಾ
ಗೋಪನತಾಮರೇಂದ್ರ ದನುಜೇಂದ್ರ ನರೇಂದ್ರಪದಂ ಸಮಸ್ತ ವಿ
ದ್ಯಾಪತಿ ನಾಭಿನಂದನನುಪಾಶ್ರಿತ ಭವ್ಯಜನಾಭಿನಂದನಂ
ಇರೆ ಹರಿಪೀಠದೊಳ್ಭರತನಾದರದಿಂ ಬೆಸಗೊಂಡುದಂ ಜಿನೇ
ಶ್ವರ ಮತದಿಂದಮಾ ವೃಷಭಸೇನಗಣಾಗ್ರಣಿ ಪೇೞ್ದುದಂ ಸವಿ
ಸ್ತರದೊಳೆ ವರ್ಧಮಾನ ಜಿನಸನ್ನಿಧಿಯೊಳ್ವಿಪುಳಾದ್ರಿಯೊಳ್ನಿಜಾ
ದರದೊಳೆ ಗೌತಮಮಾಗಧನಾಯಕನುಂ ತಿಳಿವಂತು ಪೇೞ್ದುದಂ

ಪ್ರಾಣಿಹಿತಮುಂ ವಿನೇಯ
ಪ್ರೀಣನಕರಮುಂ ಜಗತ್ತ್ರಯಪ್ರಕಟಿತ ಕ
ಲ್ಯಾಣಮುಮೀ ನೆಗೞ್ದಿಪು
ರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ

ಎಂಬ ಆದಿಪುರಾಣದ ಪ್ರಾರಂಭವನ್ನೂ

ಬೆಸಗೊಂಡಂ ಭರತೇಶ್ವರಂ ವೃಷಭಸೇನಸ್ವಾಮಿ ಕೈಲಾಸದೊಳ್
ಬೆಸಸಿಟ್ಟಂ ಪುರುನಾಥನೋಲಗದೊಳಾ ಸದ್ವೃತ್ತಮಂ ಶ್ರೇಣಿಕಂ
ಬೆಸಗೊಂಡಂ ವಿಪುಳಾದ್ರಿಯೊಳ್ ತಿಳಿಯೆ ಪೇೞ್ದರ್ ಗೌತಮರ್ ವರ್ಧಮಾ
ನ ಸಭಾಮಧ್ಯದೊಳಾ ಪುರಾಣಕೃತಿಯಂ ಬಲ್ಲಂದದಿಂ ಪೇೞ್ವೆಂ

ಎಂಬ ಜನ್ನನ ಅನಂತನಾಥಪುರಾಣದ ಆದಿಯನ್ನೂ

ಪುರುಜಿನ ವೀರಜಿನೋಕ್ತಿ
ಸ್ವರೂಪಮಂ ವೃಷಭಸೇನ ಗೌತಮಗಣಿಗಳ್
ಭರತನೃಪ ಮಗಧರಾಜ
ರ್ಗೆ ರೂಪ್ಯಗಿರಿ ವಿಪುಳಗಿರಿಗಳೊಳ್ ಬೆಸಸಿದುದಂ
****ಭಕ್ತಿಯಿಂನಾಂ ವಿಸಿರ್ಮಿಸುವೆಸೀ ಶ್ರೀಮತ್ಕಥಾಬಂಧಮಂ

ಎಂಬ ಗುಣವರ್ಮನ ಪುಷ್ಪದಂತಪುರಾಣದ ಮೊದಲಿನ ಮಾತುಗಳನ್ನೂ ಇನ್ನೂ ಇತರ ಪುರಾಣಗಳ ಆರಂಭವಾಕ್ಯಗಳನ್ನೂ ಗಮನಿಸಬಹುದು. ನಾಗಚಂದ್ರನೆಂದಂತೆ, ಮಲ್ಲಿನಾಥಪುರಾಣ ಮಾತ್ರವಲ್ಲ, ಕನ್ನಡದ ಎಲ್ಲ ತೀರ್ಥಂಕರ ಪುರಾಣಗಳೂ "ಪ್ರಥಮಾನುಯೋಗಸಂಬಂಧಿತ ಪುಷ್ಪ ಮಂಜರಿ"ಗಳು. ಆದರೂ ಈ ಪ್ರತ್ಯೇಕಪುರಾಣಗಳಲ್ಲಿಯಾಗಲಿ ತ್ರಿಷಷ್ಟಿಪುರುಷಪುರಾಣದಲ್ಲಿಯಾಗಲಿ ಇತರ ಮೂರು ಅನುಯೋಗಗಳೂ ಸಂಪೂರ್ಣವಾಗಿ ಇಲ್ಲದಿಲ್ಲ; ಅಲ್ಲಲ್ಲೇ ಉಚಿತವಾಗಿ ಬಂದೇ ಬರುತ್ತವೆ.

ಇಂತಹ ಪುರಾಣಗಳಲ್ಲಿ ಒಂದಾದ ಶ್ರೀ ಪಾರ್ಶ್ವನಾಥಪುರಾಣ ವನ್ನು ಸಂಕ್ಷೇಪವಾಗಿ ಮುಂದೆ ಕೊಟ್ಟಿದೆ.

ಶ್ರೀ ಪಾರ್ಶ್ವನಾಥ ಚಂಪು

ಶ್ರೀವಾಚಾಸಿದ್ಧಿಗಂ ನಿರ್ಮಳನಿಖಿಳ ಕಳಾವೃದ್ಧಿಗಂ ಶುದ್ಧಚಾರಿ
ತ್ರಾವಷ್ಟಂಭಕ್ಕಮಾದರ್ಶಿತಮುದನಲಸನ್ಮೂರ್ತಿಗಂ ತನ್ನೊಳೇಕೀ
ಭಾವಕ್ಕಂ ಮೆಚ್ಚಿ ಮುಕ್ತ್ಯಂಗನೆ ವರಿಯಿಸಿ ಸತ್ಸೌಖ್ಯದೊಳ್ನಿಂದನೆಂದಾ
ದೇವೇಂದ್ರಾಹೀಂದ್ರವಂದ್ಯಂ ಕುಡುಗೆ ನಮಗಭೀಷ್ಟಾರ್ಥಮಂ

ಪಾರ್ಶ್ವನಾಥಂ

ಪುರುಜಿನ ಪಾರ್ಶ್ವದೊಳ್ ವೃಷಭಸೇನಗಣಾಗ್ರಣಿ ತಜ್ಜಿನೋಕ್ತಮಂ
ಭರತನೃಪಂಗೆ ವೀರಜಿನಪಾರ್ಶ್ವದೊಳಾ ಜಿನರಾಜಸೂಕ್ತಮಂ
ಗುರುಗುಣಗೌತಮರ್ ಮಗಧಮಂಡಲಿಕಂಗೊಲವಿಂದೆ ಪೇೞ್ದುದಂ
ನಿರುಪಮವಿಶ್ರುತ ಶ್ರುತಧರೌಘಪರಂಪರೆಯಿಂದೆ ಬಂದುದಂ

ಪಾರ್ಶ್ವಜಿನಪತಿಯ ನಿಜಪದ
ಪಾರ್ಶ್ವನತಭುವನಪತಿಯ ಚರಿತಮನೊಲವಿಂ
ಪಾರ್ಶ್ವಬುಧಂ ಸತ್ಕೃತಿ ಕೃತಿ
ಪಾರ್ಶ್ವದೊಳತಿಚದುರರೋದುವಂತಿರೆ ಪೇೞ್ಗಂ.

—ಪಾರ್ಶ್ವಪಂಡಿತ

ಅನಭಿವ್ಯಕ್ತಮಾಹಾತ್ಮ್ಯ ದೇವ ತೀರ್ಥಕರಾಃ ಪರೇ।
ತ್ವಮೇವ ವ್ಯಕ್ತಮಾಹಾತ್ಮ್ಯೋ ವಾಚ್ಯಾ ತೇ ಸಾಧು ತತ್ಕಥಾ ॥

ಕುಮಾರ್ಗವಾರಿಣೇ ಯಸ್ಮಾತ್ ಯಸ್ಮಾತ್ ಸನ್ಮಾರ್ಗಧಾರಿಣೇ
ತತ್ತ್ರೇ ಧರ್ಮ್ಯಾಂ ಕಥಾಂ ವಕ್ಷ್ಯೇ ಭವ್ಯಾನಾಂ ಮೋಕ್ಷಗಾಮಿನಾಂ ॥

—ಗುಣಭದ್ರಾಚಾರ್ಯ

ಮರುಭೂತಿ-ಕಮಠರ ಭವಾವಳಿ

೧. ಮರುಭೂತಿ
೨. ವಜ್ರಘೋಷ ಗಜ
೩. ಶಶಿಪ್ರಭ
೪. ರಶ್ಮಿವೇಗ
೫. ಅಚ್ಯುತೇಂದ್ರ
೬. ವಜ್ರನಾಭಿ
೭. ಅಹಮಿಂದ್ರ
೮. ಆನಂದಕುಮಾರ
೯. ಆನತೇಂದ್ರ
೧೦. ಶ್ರೀ ಪಾರ್ಶ್ವನಾಥ

೧. ಕಮಠ
೨. ಕುಕ್ಕುಟಸರ್ಪ
೩. ಧೂಮಪ್ರಭಾನಾರಕಿ
೪. ಮಹಾಹಿ
೫. ತಮಃಪ್ರಭಾನಾರಕಿ
೬. ಕುರಂಗಕ ವ್ಯಾಧ
೭. ಮಹಾತಮಃಪ್ರಭಾನಾರಕಿ
೮. ಕಂಠೀರವ
೯. ತಮಃಪ್ರಭಾನಾರಕಿ
೧೦. ಮಹೀಪಾಲ
೧೧. ಶಂಬರ ದೈತ್ಯ.



ಭಗವಾನ್ ಪಾರ್ಶ್ವನಾಥ

(ದಿಗಂಬರ ಮೂರ್ತಿ)

[Photo: Sri G. P. Pammah]

೧. ಮಹಾಮಂತ್ರಿ ಮರುಭೂತಿ

ಜಂಬೂದ್ವೀಪದ ಭರತದ ಸುರಮ್ಯವಿಷಯದ ಪೌದನಪುರಮನರವಿಂದನೆಂಬನರಸನಾಳುತ್ತಿರೆಯಾತನ ಪುರೋಹಿತನಾದ ವಿಶ್ವಭೂತಿಯೆಂಬ ಬ್ರಾಹ್ಮಣಂಗಮಾತನ ರಮಣಿಯನುಂದರಿಗಂ

ಕಮಠಂ ಪಿರಿಯ ಮಗಂ ಕಿಱಿ
ಯ ಮಗಂ ಮರುಭೂತಿಯವರ್ಗೆ ಕಮಠನ ಚೇತೋ
ರಮೆ ವಾರುಣಿ ಮರುಭೂತಿಯ
ರಮಣಿ ಲತಾಲಲಿತತನು ವಸುಂಧರೆಯೆಂಬಳ್ ೧

ಕಮಠಂ ಕಠಿನನಧೋಗಮ
ನಮನಂ ಜಡಸಂಗತಂ ಮಹಾಮರ್ದಮ ಕ
ರ್ದಮಲೋಲನೆನಿಪವಂ ಭವ
ಸಮುದ್ರದೊಳ್ಮಗ್ನನಪ್ಪುದೇಂ ವಿಸ್ಮಯಮೇ ೨

ಮರುಭೂತಿಯೆನಿಸಿ ವಿತರಣ
ಸುರಭೂಜವಿರಾಜಿತಂ ವಿಶುದ್ಧಯಶೋವ
ಲ್ಲರಿಯಿೀಪರಿ ಶೋಭಿಪನ
ಚ್ಚರಿ ಬಗೆವಡೆ ಸರಸಹೃದಯನಾ ಮಂತ್ರಿಸುತಂ ೩

ಇಂತಿರಲೊರ್ಮೆ ವಿಶ್ವಭೂತಿ ತನ್ನ ತಲೆಯ ನರೆಯಂ ಕಂಡು

ಆನಿನಿತು ಕಾಲಮಾತ್ಮಾ
ಧೀನಸೆನೆದನುಳಿದು ಮುಪ್ಪು ಚಪ್ಪರಿಸೆ ಪರಾ
ಧೀನನೆನಿಸುವೆನೆ ತಪದಿನ
ನೂನಸ್ವಾಧೀನ ಸೌಖ್ಯಮಂ ಸಾಧಿಸುವೆಂ ೪

ಎಂದು ತಱಿಸಂದು

ಪ್ರಾಜ್ಞಂ ಪತಿಪರಿಜನಕೆ ಮ
ನೋಜ್ಞಂ ಮರುಭೂತಿಯಾತನಿರೆ ಕಮಠನನ
ತ್ಯಜ್ಞನನಸ್ಮತ್ಪದವಿಗ
ವಜ್ಞಾಯೋಗ್ಯನನದೆಂತೊ ಪತಿಗಪ್ಪಯಿಸೆಂ ೫

ಎಂದು ನಿಶ್ಚಯಿಸಿ ನಿಜಚಿತ್ತವೃತ್ತಿಯೊಳ್ ಮುಂಪುಟ್ಟಿದ ಸಂಸಾರ ಕಾರಣಮಪ್ಪಜ್ಞಾನಮನುದಾಸೀನಂ ಮಾಡುವಂತೆ ಕಮಠನನುದಾಸೀನಂ ಮಾಡಿ ಬಱಿಕ್ಕುದಯಿಸಿದ ವಿವೇಕಮಂ ಸ್ವೀಕರಿಪಂತೆ ಮರುಭೂತಿಯಂ ಸ್ವೀಕರಿಸಿಯರವಿಂದ ಮಹಾರಾಜನಲ್ಲಿಗಾ ಮರುಭೂತಿಯನೊಡಗೊಂಡು ಪೋಗಿ

ಒಸೆದೆನ್ನನಧೀಶ್ವರ ಶಿ
ಕ್ಷಿಸಿ ನಡೆಯಿಸಿಕೊಂಡ ತೆಱದಿನೀತನುಮಂ ಶಿ
ಕ್ಷಿಸಿ ನಡೆಯಿಸಿಕೊಳ್ವುದೆನು
ತ್ತ ಸಚಿವನಪ್ಪಯಿಸಿದಂ ನೃಪಂಗಾತ್ಮಜನಂ ೬

ಅಂತು ತನೂಜನಂ ನಿಜರಾಜಂಗಪ್ಪಯಿಸಿ ವಿಶ್ವಭೂತಿಪೋದನಿತ್ತಲ್

ಅತುಳಪರಾಕ್ರಮಕ್ಕೆ ಸುನಯಂ ವಿಭವಕ್ಕೆ ಪರೋಪಕಾರಮು
ನ್ನಿತವಚನಕ್ಕೆ ಸತ್ಯಮಱಿವಿಂಗೆ ಸದಾಚರಣಂ ಕುಲಕ್ಕೆ ಪೆಂ
ಪತಿಶಯ ಪುಣ್ಯದೇೞ್ಗೆಗೆ ನಿಜೋದ್ಯಮಮೆಯ್ದೆ ಸಹಾಯಮಪ್ಪವೊ
ಲ್ಪತಿಗೆ ಸಹಾಯನಾಗಿ ಪಡೆದಂ ಮರುಭೂತಿ ಮಹಾವಿಭೂತಿಯಂ ೭

ಇಂತಿರ್ಪುದುಮೊರ್ಮೆ

ಚರನೊರ್ವಂ ಪರಿತಂದು ಭೂಪತಿಗೆ ಬೇಗಂ ಕಾರ್ಯವಿಜ್ಞಾಪನಾ
ತುರಚಿತ್ತಂ ಪೊಡೆವಟ್ಟು ಬಿನ್ನವಿಸಿದಂ ನಿಮ್ಮಾಜ್ಞೆಯಂ ಮೀಱಿ ದೇ
ವರ ಠಾಣಾಂತರಮಂ ತಿರಸ್ಕರಿಸಿ ನಾಡಂ ವಜ್ರವೀರಂ ದುರೋ
ದ್ಧುರಶೌರ್ಯಂಬಿಡೆ ಕಾದಿ ಗೋೞಿಡಿಸಿದಂ ಸ್ತ್ರೀಬಾಳರಂ ವೃದ್ಧರಂ ೮

ಎನೆಯರವಿಂದನದಂ ಕೇಳಿ

ಇನ್ನೆವರಂ ಪರಚಕ್ರ
ಕ್ಕೆನ್ನಯ ದೆಸೆಯಿಂದೆ ಭೀತಿಯಿಲ್ಲದೆ ಪೆಱರಿಂ
ದೆನ್ನ ಜನಪದಕೆ ಭಯಮಿ
ಲ್ಲಿನ್ನದು ವಿಪರೀತಮಾದೊಡಾಂ ಸೈರಿಪೆನೇ ೯

ಎಂದ ಮುಳಿಸಂ ಮರುಭೂತಿ ಕಂಡು

ನಯನಿಪುಣರುಪಾಯ ಚತು
ಷ್ಟಯದೊಳ್ಸಾಮಮನಗಣ್ಯ ಷಾಡ್ಗುಣ್ಯದೊಳಾ
ರಯೆ ಸಂಧಿಯಂ ಮೊದಲ್ಮಾ
ಡಿಯೆ ಪೇೞ್ದರ್ನಾಮುಮಂತೆ ನೆಗಲಲೆವೇೞ್ಕುಂ ೧೦

ಎನೆ ಭೂಪನದನೊಪ್ಪಿ ದೂತನಂ ಕಳುಪೆ ವಜ್ರವೀರಂ

ಅರಸಂ ವೃದ್ಧನಮಾತ್ಯಂ
ಪರಿಕಿಸೆ ಶಿಶು ದೇಶಕಾಲಮಂ ಸ್ವಪರಬಳಾಂ
ತರಮನಱಿವನ್ನರಿನ್ನಾರ್
ನಿರುಪಮಮತಿ ವಿಶ್ವಭೂತಿಯಿಲ್ಲಪ್ಪುದಱಿಂ ೧೧

ಎಂದು ತಿರಸ್ಕರಿಸಲರವಿಂದಮಹಾರಾಜಂ ಯುದ್ಧೋದ್ಯುಕ್ತನಾಗಲಾ ಮರುಭೂತಿ ನಿಜಜನನಿಯ ಸಮೀಪಕ್ಕೆ ವಂದು

ಅರಸಂ ವೈಹಾಳಿಗೆ ಸಂ
ಚರಿಸಲೊಡಂ ಪಿಂದೆ ನಿಲುವುದನುಚಿತಮೆನೆ ಸಂ
ಗರದೆಡೆಗೆ ನಡೆ[ಯೆ ತಡೆ]ವುದು
ಪರಿಭಾವಿಸೆ ಸೇವಕಂಗೆ ಪಾೞಿಯೆ ಪೇೞಿಂ ೧೨

ಅದು ಕಾರಣದಿಂ ನೀಮುಂ
ಮುದಗ್ರಜನುಮೆನಗೆ ನಿಯಮಿಸುವುದಂ ತಡಮಿ
ಲ್ಲದೆ ನಿಯಮಿಸಿ ಕಳುಪುವುದೆಂ
ಮುದಾತ್ತಮತಿ ನುಡಿದು ಮತ್ತಮುಂದಿಂತೆಂದಂ ೧೩

ನಿಮ್ಮ ಪರಿವಾರಮಂ ನೊಸೆ
ಯುಂ ಮುನ್ನಿನ ಮಾೞ್ಕೆಯಿಂದೆ ಬೆಸಕೆಯ್ಸಿಕೊಳು
ತ್ತುಮ್ಮಳಿಸದಿಪ್ಪುದಂಬಿಕೆ
ನಿಮ್ಮಾಶೀರ್ವಾದಮೆನಗೆ ವಜ್ರದಕವಚಂ ೧೪

ಎಂದು ತಾಯ ನಲ್ವರಕೆಗಳಂ ತಳೆದು ಬೞಿಯಂ ನಿಜಾಗ್ರಜಂಗೆ ಕೈಗಳಂ ಮುಗಿದು

ಗುರು ನಿಮ್ಮಂ ನಿಶ್ಚಿಂತದೊ
ಳಿರಿಸುವ ಭರದಿಂದೆ ಭಾರಮಪ್ಪುದನೆನ್ನೀ
ಶಿರದೊಳ್ತಂದಿಟ್ಟೆಡಮೀ
ಗುರುಭಾರಂ ನಿಮ್ಮದೆನಗೆ ಗುರುವಪ್ಪುದಱಂ ೧೫

ನಿಯತಂ ಸೇವಕನಪ್ಪವಂಗೆ ಪಸಿವಂ ನೀರೞ್ಕೆಯುಂ ನೋಡದ
ಪ್ರಿಯ ಶೀತಾತಪ ಬಾಧೆಗೊಡ್ಡಿ ತನುವಂ ದುಃಖಂಬಡಲ್ವೇೞ್ಕುಮಾ
ರಯೆ ನೀಮಪ್ಪಡೆ ಸೌಖ್ಯಮೂರ್ತಿಗಳೆ ಪುಟ್ಟಿರ್ದಂತೆ ಕೈಬೇಯಲೇ
ಕೆಯೊ ಪೇೞಿಂದಿದನಾಂತೆನೀ ಪದಕೆ ನೀಮಿರ್ದಂತಿರಾಂ ಯೋಗ್ಯನೇ ೧೬

ತಂದೆಯು ಪರೋಕ್ಷದೊಳ್ನೀಂ
ತಂದೆಯೆ ಎನಗದಱಿನಮಳಗುಣಸಂಪದದೊಳ್
ನಿಂದೆ ನಿನಗಾವ ತೆಱದಿಂ
ನಿಂದೆ ದಿಟಂ ಪೊರ್ದದಂತು ನಡೆ ನಿಯತತೆಯಿಂ ೧೭

ಜನನಿಗೆ ಬೆಸಕೆಯ್ವುದು ನಾ
ದುನಿಯುಂ ಬೆಸಕೆಯ್ಸಿಕೊಳ್ವುದನವರತಂ ಸ
ಜ್ಜನಗೋಷ್ಠಿಯೊಳಿರ್ಪುದು ದು
ರ್ಜನರಂ ಪರಿಹರಿಪುದುೞಿವುದಸದಾಗ್ರಹಮಂ ೧೮

ಭೋಗಮನನುಭವಿಸುವುದು
ದ್ವೇಗಂ ಪರರ್ಗಾಗದಂದದಿಂ ತ್ಯಾಗಮನು
ದ್ಯೋಗಿಸುವುದು ಯಶಮುಂ ಪು
ಣ್ಯಾಗ[ಮ]ಮಂ ಮಾಡಲಾರ್ಪುದಂ ನಯನಿಪುಣಾ ೧೯

ಎಂದಿಂತು ಮಂತ್ರಿಮುಖ್ಯಂ ಕಮಠಂಗೆ ಸಮಸ್ತಭಾರಮಂ ಸಮರ್ಪಿಸಿ ವಿನಯಪುರಸ್ಸರಂ ಬೀೞ್ಕೊಂಡಖಂಡಿತಪ್ರೇಮವಸುಂಧರೆಯೆನಿಸಿದ ವಸುಂಧರೆಯುಂ ಸಾರ್ಗ್ಗೆ ಕರೆದು ಪಲವು ತೆಱದ ಸಾಂತ್ವವಚನಂಗಳಂ ನುಡಿದೆಂತಾನುಂ ಸಂತಯ್ಸಿ ಪೋಪನಿತ್ತಲ್

ರವಿಶಶಿಗಳಗಲೆ ಗಗನ
ಕ್ಕವತಮಸಮಧೀಶನಪ್ಪವೊಲ್ ನೃಪಸಚಿವ
ರ್ಭುವನೇಕ್ಷಣರಗಲೆ ಪುರ
ಕ್ಕವಿನಯಪರನೆನಿಪ ಕಮಠನಧಿಪತಿಯಾದಂ ೨೦

ನೃಪನ ಲಸಲ್ಲತಾಂಗಿಯರೆ ತನ್ನ ಲತಾಂಗಿಯರಾವಗಂ ನೃಪ
ದ್ವಿಪಮೆ ನಿಜದ್ವಿಪಂ ನೃಪನ ಭೂಷಣರಾಜಿಯೆ ತನ್ನ ಭೂಷಣಂ
ನೃಪನ ತುರಂಗಮುಂ ನಿಜತುರಂಗಮುಮಾಗೆ ನೃಪಾಳಲೀಲೆಯಂ
ಚಪಳಚರಿತ್ರನಾಂತು ನೃಪಮಂದಿರದೊಳ್ನೆಲಸಿರ್ದನುದ್ಧತಂ ೨೧

ವ್ಯಸನಂ ಜೂದಿನೊಳೆ ರತಿ
ವ್ಯಸನಂ ಪರದಾರಗಮನದೊಳ್ನಿಜದಾನ
ವ್ಯಸನಮಸಜ್ಜನರೊಳೆ ಪಸ
ರಿಸಿತು ಖಳಾನ್ವಿತರ್ಗೆ ಸದ್ಗುಣಂ ಸಮನಿಕುಮೇ ೨೨

ನಂಟರ್ಕಿತವರೆ ಜೂದಿನ
ತಿಂಟಿಯೆ ನೆಲಸಿಪ್ಪ ತಾಣಮನ್ಯಾಂಗನೆಯಂ
ಕಂಟಿಸದೆ ತಂದು ಕೂಡುವ
ಕುಂಟಣಿಗಳವಂಗೆ ಮಾನ್ಯರಿನ್ನೇವೇೞ್ವೆಂ ೨೩

ಜನನಾಥಪ್ರಿಯಮಪ್ಪ ಸರ್ವ್ವಮಣಿಭೂಷಾವ್ರಾತಮಂ ತೊಟ್ಟು ವ
ಸ್ತ್ರನಿಕಾಯಂಗಳನುಟ್ಟು ವಾಹಮನಲಂಪಿಂದೇಱೆ ವಾರಾಂಗನಾ
ಜನಮಂ ಭೋಗಿಸಿ ಮಾಣದಾ ಕುಮತಿ ಗಂಡಸ್ಯೋಪರಿಸ್ಫೋಟನಂ
ಬನಯುಜ್ಞೋಕ್ತಿಯನಾಂತು ನಾಡುನಿಯೊಳಂ ಸಂಸಕ್ತಿಯಂ ಮಾಡಿದಂ

ಆದರಾ ಋಜುಸ್ವಭಾವದ ಕಾಂತೆ ತಾನಾ ವಕ್ರಸ್ವಭಾವಂ

ಬಿರಿಯಿಸಿ ಬೇಂಟದೊಳ್ಮನಮನಾಟರೆಯುಂ ಮನಮೀಯದಿರ್ದವಂ
ತಿರದೆ ಬಱಿಕ್ಕಮಾ ಖಳನ ಲಲ್ಲೆಗೆ ತಾನೊಳಗಾದಳಾ ವಸುಂ
ಧರೆ ಮತಿಗೆಟ್ಟು ನೈಜಪಥವರ್ತಿನಿ ಮುನ್ನೆ ವಿರುದ್ಧಮಾದುದಿಂ
ಪರಿವವೊಲುದ್ಘಸೇತುವನೆ ಮೀಱಿ ನದೀಜಲಮಾತ್ತವೇಗದಿಂ ೨೫

ಇಂತಾ ಪಾತಕಿ ಭೂತಳಂ ಪಱಿಯೆಯುಂ ಭೀತಿಯಿಲ್ಲದಾ ಕಾತರ ನೊಳ್ಚಿಂತಃಪ್ರೀತಿಯಂ ಮಾಡೆ

ಕಾಪಱಿಯೆ ಪಱಿಯೆ ಜಗಮುವ
ನಾಪೊಱ್ತುಂ ತಾಯ ಪೆಂಡತಿಯ ಪೇೞ್ವ ಹಿತಾ
ಳಾಪಮನಾಪ್ತರ ನೀತಿಕ
ಳಾಪಮನುಱದವಳೊಳಾ ಖಳಂ ಮಱೆವಾೞ್ದಂ ೨೬

ಇತ್ತಲರವಿಂದ ಮಹಾರಾಜಂ ವಜ್ರವೀರನಂ ಕಾದಿ ಕೊಂಡು

ನಿಜರಾಜಧಾನಿಗನ್ವಿತ
ವಿಜಯಂ ಶ್ರೀಧರ್ಮನಂದನಂ ತಾನೆನೆ ಭೂ
ಭುಜನಭಿಮುಖನಾದಂ ತ
ನ್ನ ಜಸಂ ದಿಙ್ಮುಖಕ್ಕೆ ಪಸರಿಸುವಿನೆಗಂ ೨೭

ಮರುಭೂತಿ ತಾನುಂ ನಿಜಸ್ವಾಮಿಯೊಡನೆ ಪೌದನಪುರಕ್ಕೆ ವಂದು ನಿಜನಿವಾಸಮಂ ಪೊಕ್ಕು

ಅಂತು ಕೆಲದಿವಸಮಿರ್ಪುದು
ಮಂತರ್ವರ್ತಿಗಳುದಗ್ರನಪ್ಪಗ್ರಜ ವೃ
ತ್ತಾಂತಮನಱಿಪಿದಡೆ ನಿಜ
ಸ್ವಾಂತದೊಳಿಂತೆಂದು ಚಿಂತಿಸಿದನಾ ಸಚಿವಂ ೨೮

ಮಡದಿಯರನರ್ಥಮುಳ್ಳಡೆ
ಪಡೆಯಲ್ ಬರ್ಕುಂ ಸಹೋದರರನೇನಿತ್ತುಂ
ಪಡೆವರೆ ಪೆಂಡಿರ ದೂಸಱಿಂ
ನೊಡವುಟ್ಟಿದರ್ಗೆಂತು ಮುಳಿಯಲಕ್ಕುಂ ತಕ್ಕಂ ೧೯

ಎಂದು ನಿಜಪ್ರಿಯೆಯುಂ ಪು
ಲ್ಲಿಂದಂ ಕೀೞಾಗಿ ಬಗೆದು ತೊಱೆದುಂ ಮನದೊ
ಳ್ನೊಂದ [ಪ] ನಗ್ರಜನಱಿದಂ
ದೆಂದುತ್ತ[ಮನೆಂದಿ]ನಂತೆ ನಡೆಯಿಸುತಿರ್ದಂ ೨೦

ಅಲ್ಲದೆ

ಅನಿತೊಂದಗ್ರಜನನಯು
ಕ್ಕೆನಸುಂ ಮುನಿಯನೆ ನೃಪಾಳಕಂ ಕೇಳಲೊಡಂ
ಜನಿಯಿಕುಮುಪಾಯಮಣ್ಣಂ
ಗೆನುತಂ ಚಿಂತಿಸಿದನೇಂ ಮಹಾತ್ಮನೊ ಸಚಿವಂ ೨೧

ಅಂತು ಚಿಂತಿಸುತಿರ್ಪುದುಮುಂಜಲಂಜಲ್ಬೆಳಗಾದುದೆಂಬಂತೆ ಭೂಕಾಂತನಾ ಕಮಠನ ದುರ್ವೃತ್ತಾಂತಮನಂತಶ್ಚರರಿಂದಂ ತಿಳಿದು ತನ್ನಂ ಬರಿಸೆ ಮರುಭೂತಿ ಬಂದು ಪೊಡೆವಟ್ಟು ಕಟ್ಟುಕಡೆದು ಸಶಂಕಿತನಾಗಿ ಸಿಂಹಾಸನದ ಕೆಲದೊಳ್ತನಗಿಕ್ಕಿದುಚಿತಾಸನದೊಳ್ಕುಳ್ಳಿರ್ಪುದುಂ ಸಚಿವಂಗರಸನಿಂತೆಂದಂ

ಏಕಾಂತಮಾಗಿಯುಂ ಮಗು
ೞ್ದೇಕಾಂತಮೆನಿಪ್ಪುದಲ್ತು ನಿಮ್ಮಗ್ರಜನ
ವ್ಯಾಕುಳತೆಯಿಂದೆ ನೆಗೞ್ವುದು
[ಲೋ]ಕಾಂತಮದಂ ವಿಚಾರಿಪಂತಱಿಯದರಾರ್ ೨೨

ಆಮಿನಿತು ದೆವಸಮಱಿದುಂ
ನೀಮೆ ನಿಜಾಗ್ರಜನನಱಿದು ನೆಱೆ ತೊಱೆದಪಿರೆಂ
ಬೀ ಮನದೊಳಿರ್ದಮುಚಿತಮ
ನೇಮಾತಱಿದಪರೆ ಮೋಹವಿಘಟಿತಮತಿಗಳ್ ೨೩

ಮುನ್ನಮೆ ನಿಜಪಿತೃ ನಯನಂ
ಪನ್ನಸನಾಗತಮನಱಿದು ತೋಱಿದವನಂ ನೀ
ಮಿನ್ನೆವರಮಱಿಯದೊಳಕೊಂ
ಡನ್ನೆಯಮಿಡೆ ಸಾಲ್ವುದಿರಿಸದಿಂ ಪರಿಹರಿಸಿಂ ೩೪

ಎನೆ ಜನಪತಿ ಸಚಿವಂ ಭೂ
ಪನ ಕೋಪಮನಱಿದು ದೇವ ಕೇಳದುದಂ ನೀ
ಮೆನಗೆ ಬೆಸಸುವಿ[ರಿ]ಯಾದೊಡ
ಮನುಕಂಪೆಯಿನಧಿಪ ನೀಂ ವಿಚಾರಿಪುದಿನ್ನುಂ ೩೫

ಎಂಬುದುಂ ಜಗತೀಪತಿ ಮುಗುಳ್ನಗೆ ನಗುತ್ತ 'ಮೆಂತೊ ನೀಮಿಂ ಮುಚ್ಚು ವಿರೂರುಟ್ಟು ನಾಡು ಮೇಲ್ಕೊಂಡುದದಂ' ಎಂದು ಮರುಭೂತಿಯ ಲಜ್ಜೆಯಂ ಕಳೆಯಲೆಂದು

ವಿನಯನಿಧಿ ವಿಶ್ವಭೂತಿಗೆ
ಜನಿಯಿಸಿ ನಿಮ್ಮಗ್ರಜಾತನೆನಿಸಿಯುಮಂ ದು
ರ್ಜನನಾದನಿಂಗಡಲ್ಗಮ
ರ್ದನೊಡನೆ ವಿಷಮುದಯಿಪಂದದಿಂದಂ ಕಮಠಂ ೩೬

ಅದು ನಿಮಿತ್ತಮಾ ದುರ್ವೃತ್ತನ ಕೇಡಿಂಗೆ ಅಲಲಿಲ್ಲೆಂದು ತಳಾಱನಂ ಬರಿಸಿ

ಅತಿ ಕುಪಿತನಾಗಿಯುಂ ಕ್ಷಿತಿ
ಪತಿ ಯತಿಗಂ ಬ್ರಾಹ್ಮಣಂಗಮಾವುದು ಶಾಸ್ತ್ರೋ
ದಿತ ದಂಡಮದನೆ ಕಮಠಂ
ಗೆ ತಡೆಯದೆಸಗೆಂದು ಬೆಸಸಿದಂ ನೀತಿವಿದಂ ೩೭

ಅಂತು ವಸುಧೇಶಂ ಬೆಸಸೆ

ಮರುಭೂತಿಯ ಕೂರ್ಪಿಂಗೋ
ಸರಿಸಿಯೆ ಕಮಠಂಗದೇನುಮಂ ಮಾಡದೆ ಪ
ಲ್ಮೊರೆವವನರಸನ ನಿಯಮಮ
ನೆರಡಿಲ್ಲದೆ ಪಡೆದು ತಡೆಯಲೇನಱಿವಪನೇ ೩೮

ಪುಟ್ಟಿದ ಮುಳಿಸಿಂದಂ ಚೌ
ವಟ್ಟದೆಡೆಗೆ ತಂದು ಕಟ್ಟಿ ಕುಟ್ಟುವೆನೆನುತಂ
ನಿಟ್ಟಿಸಿ ಕಂಡನವಂ ಚೌ
ವಟ್ಟದ ತಿಂಟೆಯೊಳೆ ನಿಂದು ಜೂಜಾಡುವನಂ ೩೯

ಅಂತು ನೀಡುಂ ಜೂಜಾಡುವ ಕಮಠನಂ ಕಂಡು ಈ ದುರಾಚಾರಪರಿಣತಂ ಮರುಭೂತಿಯ ಮನೆಯೊಳಿರದೀಯೆಡೆಯೊಳಿರ್ದನಾಯಾಸಮಂ ಮಾಡಿದನಲ್ಲದಂದಕ್ಷೂಣಗುಣನಿಧಿಯ ದಾಕ್ಷಿಣ್ಯಮನೆಂತುಂ ಮೀಱಲ್ಬಾರದೆಂದಾ ಕ್ರೂರಾತ್ಮನುಂ ತನ್ನ ಚಿತ್ತದೊಳ್ಬಗೆಯುತ್ತಮೆಯ್ದೆವಂದು

ನೃಪನೀಯೆ ನಿಯಮಮುಮಂ ದಂ
ಡಪಾಶಿಕಂ ಕುಟ್ಟಿ ಕಟ್ಟಿ ಕಮಠನನವನಂ
ತಪಮಾನಮನೆಯ್ದಿಸಿ ತ
ನ್ನ ಪೆಸರನನ್ವರ್ಥಮೆನಿಸಿದಂ ಜನದಿಂದಂ ೪೦

ಅನಿತರ್ಕಲ್ಲಿ ನೆರೆದು ಜೂಜಾಡುತಿರ್ದ ಧೂರ್ತಜನಂಗಳೆಲ್ಲಂ ತನತನಗೆ ಕಮಠಂಗನುಪರಂಗೆ ಮುನಿಯೆ

ವನಮುಂ ಸುಡವಗ್ನಿಗೆ ವಾ
ಯು ನಂಟನದೆ ದೀಪನಾಶಮಂ ಮಾಡುವವೊ
ಲ್ಜನತೇಜಂ ಕಿಡೆ ಕಮಠಂ
ಗನುಕೂಲಜನಾಳಿಯಾಯ್ತು ತಾಂ ಪ್ರತಿಕೂಲಂ ೪೧

ಅಂತವನ ಘನಶ್ರೀಯುಪರಸಂಧ್ಯಾಶ್ರೀಯಂದದಿಂ ದೋಷಾಭಿವೃದ್ಧಿಗೆ ಕಾರಣಮಾಗಿ ಪಾಜುಂಪ್ರೋಗೆ ರಾಗಿಜನಂಗಳೊಂದಾಗಿ ಅನೇಕಪರಿಯಿಂದವನಂ ಪರಿಭವಿಸಿ ತಮರ್ಗಳ್ ಕೆಲರಿಂತೆಂದರ್

ಆ ತಂದೆಗೆ ಪುಟ್ಟಿಯುಮೀ
ಖ್ಯಾತನ ಮರುಭೂತಿಯೊಡನೆ ಪುಟ್ಟಿಯುಮಿವನಿಂ
ತೀ ತೆಱದವಸ್ಥೆವಡೆದನ
ನೀತಿಪರಂಗಿಸಿತಜಾಂದಮುಗ್ಗಳಮಕ್ಕುಂ ೪೨

ಗುಣಹೀನನೆನಿಪ ಕಮಠನ
ಪಣಮುಂ ಕುಲಮುಂ ಮಹೋನ್ನತಿಯು[ನದನೇ]ಕ
ಕ್ಷಣಮಿರಿಸಲಾಱವದಱಿಂ
ಗುಣಮೆ ಮಹೋನ್ನತಿಗೆ ಕಾರಣಂ ಪೆಱತುಂಟೇ ೪೩

ಪಲರಂ ಬಾಧಿಪ ಪುಲಿಯುಂ
ಕೊಲೆ ಸಂತಸಮಪ್ಪ ತೆಱದೆ ಕಮಠನನನಯಾ
ಕಳಿತನನರಸಂ ದಂಡಿಸೆ
ತಲೆದೋಱಿದುದಖಿಳಪುರಜನಕ್ಕನುರಾಗಂ ೪೪

ಅಂತು ಪರಿಭವಿಸಿ ಪುರದಿಂ ಪೊಱಮಡಿಸಿ ಕಳೆಯೆ ರಾಜಧಾನಿಗೆ ದಶಯೋಜನ ದೂರದೊಳ್ವಿರಾಜಿಸುತಿರ್ಪ ಭೂತನಗಕ್ಕೆ ಪೋಗಿ ಕಮಠನಾ ದುರಾಚಾರಂ ದುರಾಚರಣಕ್ಕೆ ಬೆರಲೆತ್ತುವಂತೂರ್ಧ್ವಬಾಹುವಾಗಿ ತಪಮಂ ಮಾಡುತ್ತಮಿರ್ದನಿತ್ತಲ್ ಮರುಭೂತಿ ನಿಜಾಗ್ರಜನ ಪೋದ ದೆಸೆಯನಱಿಯದೆ ಚಿಂತಿಸುತಿರ್ಪನವೊರ್ವಂ ಬಂದು ನಿಮ್ಮಗ್ರಭವಂ ಭೂತಶೈಳದ ಸಮೀಪದ ತಾಪಸಾಶ್ರಮದೊಳ್ತಾಪಸನಾಗಿರ್ದನಂ ಕಂಡೆನೆಂದೊಡಾನಂದಮಂದಿರಹೃದಯನರವಿಂದ ಮಹಾರಾಜನ ರಾಜಮಂದಿರಕೆ ವಂದು

ದೇವ ದಯಾಳು ನೀನೆ ವಲಮುಲ್ಲದೊಡುಗ್ರಮದಗ್ರಜನ್ಮನು
ದ್ಗ್ರೀವತೆಗಾರೊ ಶೂದ್ರವಿಧಿಯಂ ನೆಱಿಮಾಡದೆ ಮನ್ನಿಪನ್ನರು
ರ್ವೀವರರೆಂಬಿದಂ ಬಗೆದು ನಿರ್ಭಯನಾಗಿ[ಯೆ] ಬಿನ್ನವಿಪ್ಪೆನೊ
ಲ್ವೀವುದವಾಗಪೆನ್ನದೆ ನಿಯಾಮಮನಪ್ರತಿಮಪ್ರಭಾವ ನೀಂ ೪೫

ಎಂದು ನುಡಿದ ನಿಜಸಚಿವನ ವಚನವನವಧಾರಿಸಿ ಏನೆನೆ

ಮಾನಸನೊರ್ವಂ ಬಂದವ
ಮಾನಮನೆಯ್ದಿದನ ವಾರ್ತೆಯಂ ಪೇಳ್ದನದ
ರ್ಕಾನಲ್ಲಿಗೆ ಪೋಗಿ ಮನೋ
ಗ್ಲಾನಿಯನಪಹರಿಪೆನುಚಿತವಚನಾಮೃತದಿಂ ೪೬

ಎಂದೊಡರವಿಂದ ಮಹಾರಾಜಂ ಮುಗುಳ್ನಗೆಯುಂ ನಗುತ್ತಮಿಂತೆಂದಂ

ಮನೆಯೊಳಗಣ ಪಾವಂ ನೆ
ಟ್ಟನೆ ಕಳೆವಂತವನನೆತ್ತಿ ಕಳೆದಡೆ ನಿಮಗೇ
ಕಿನಿತೊಂದು ಖೇದಮಾ ದು
ರ್ಜನನಿರೆ ಕೇಡಲ್ಲದೊಳ್ಳಿತೇನಾದಪುದೇ ೪೭

ಮತಿಗೆಟ್ಟವನಿರ್ದೆಡೆಗಱ
ಸಿ ತಿಂಬ ದೈವಕ್ಕೆ ಪೋಗಿ ಪಾಲಂ ಬಿಡುವಂ
ತತಿಮೋಹದಿಂದೆ ಪೋದಡೆ
ಗತಿ ಕೆಡುಗುಂ ಪ್ರಾಣಬಾಧೆಯುಕ್ಕುಮಮೋಘಂ ೪೮

ಅದುಕಾರಣದಿನಾ ದುರಾತ್ಮನೆಂತುಂ ಪರಿಹರಣೀಯನಲ್ಲದೆ ಸ್ವೀಕರಣೀಯನಲ್ಲೆಂದೆನಿತು ಪೇಳ್ದಡಂ

ಅತಿಮೋಹಂ ಗತಿಯುಂ ಕರಂ ಕಿಡಿಕುಮೆಂಬೀ ಮಾತು ಕೈಗೂಡೆ ಸ
ನ್ಮತಿಹೀನಂ ಮರುಭೂತಿಯುಗ್ರಭವನೊಳ್ಮೆಯ್ವೆತ್ತ ದುರ್ಮೋಹಸಂ
ಗತಿಯಿಂ ಮುಂದಣ ಜನ್ಮದೊಳ್ಜನಿಯಿಪಾ ಹಸ್ತಿತ್ವದಿಂ ಮುನ್ನೆ ಮೂ
ರ್ಖತೆ ಬಂದಿರ್ದಪೊಲಣ್ಣನಂ ತಿಳಿಸಿ ತಪ್ಪುರ್ದ್ಯೋಗಮುಂ ತಾಳ್ದಿದಂ ೪೯

ಆಸನ್ನಮೃತ್ಯುಗನಯಮೆ
ಲೇಸಾಗಿಯೆ ತೋರ್ಪುದಕ್ಕುಮಲ್ಲದೊಡೆ ಗುಣಾ
ವಾಸಂ ಪತಿ ಪೇೞ್ವುದನಂ
ತಾ ಸಚಿವಂ ಮಱಿದಕಾರ್ಯದೊಳ್ವರ್ತಿಪನೇ ೫೦

ಅಂತು ತಿಳಿಸಿ ತಪ್ಪುರ್ಪಾಯಮುಪ್ಪ ಬಗೆಯನೆ ಬಗೆದು ಮರುಭೂತಿ ಕಟ್ಟಿತಂ ಕಳೆವವನಾವನೆಂಬಿನೆಗಮೊರ್ವನೆ ನಟ್ಟಿರುಳ್ಳಳಿಲನೆರ್ದು ಪೋಗಿ ಪರಿದಾ ಭೂತಶೈಲೇಂದ್ರಮನೆಯ್ದಿವಂದು ತಾಪಸರೂಪಮುಂ ಸ್ವೀಕರಿಸಿದ ಸಹೋದರನ ವಿಲೋಕನದಿಂ ಶೋಕೋದ್ರೇಕಮಾಗೆ ಮನ್ಯುವಿಕ್ಕಿ

ನೀನಿಲ್ಲದೊಡೆನಗೇವುದೊ
ಭೂನಾಯಕನಿತ್ತಮಾತ್ಯಪದಮದಱಿಂದಂ
ನೀನಾದುದನಷ್ಟೆಂ ಪೆಱ
ತೇನಗ್ರಜ ನಿನ್ನದೊಂದು ಲೋಕಮೆ ಲೋಕಂ ೫೧

ಎಂದು ಮರುಭೂತಿ ಬಂದು ಕಾಲ್ಗೆಱಗೆ ಕಮಠಂ

ಅಲ್ಲಿ ಪರಿಭವಮನೆನಗೞ
ವಲ್ಲದುದಂ ತನ್ನ ನೃಪತಿಯಿಂ ಮಾಡಿಸಿ ಮ
ತ್ತಿಲ್ಲಿಗಮಱಿಪಲ್ಬಂದಂ
ನಿಲ್ಲದಿವಂ ಧೂರ್ತನೆಂದು ಮುಳಿಸಂ ತಳೆದಂ ೫೨

ಅಂತದೆ ಮುಳಿಸಿಂ ಕಲ್ಗೊತ್ತು ನಿಂದ ಕಮಠಂ ಕಾಲ್ವಿಡಿದನ ತಲೆಯೊಳಿಕ್ಕೆ ಸಿಲೆಯನದಂ ಪೊಡೆವಡಲ್ಬೋಗೆ ದೇಗುಲಂ ಮೇಲೆ ಕೆಡೆದುದೆಂಬ ನುಡಿ ನನ್ನಿಯಾಗೆ ತನ್ನ ತಲೆಪೊ[ಱೆ]ಯಾಗಿರ್ದ ತಮ್ಮನೊಡೆಯಿಕ್ಕುವಂತೆ

ಪಾತಕನಿಕ್ಕಿದ ದೃಷದಭಿ
ಘಾತದೆ ನಿರ್ಘಾತಘಾತದಿಂ ಗಿರಿಶಿಖರಂ
ಪಾತೇನೊಡೆವಂದದೆ ಮರು
ಭೂತಿಯ ತಲೆಯೊಡೆದು ನುಚ್ಚುನೂಱಾಯ್ತಾಗಳ್ ೫೩

೨. ವಜ್ರಘೋಷ

ಅಂತಾರ್ತಧ್ಯಾನಾಧೀನ ಮಾನಸಂ ಪ್ರಾಣಪರಿತ್ಯಾಗಂ ಮಾಡಿ ಮಲಯಪರ್ವತದ ಕುಬ್ಜಕವೆಂಬ ಸಲ್ಲಕೀವನದೊಳ್ ವಿವೇಕವಿರಹಿತ ಚರಿತಂ ಮರುಭೂತಿ ವಜ್ರಘೋಷಮೆಂಬ ಗಂಧಸಿಂಧುರಮಾಗಿರೆ ವಾರುಣಿಯುಂ ಪಿಡಿಯಾಗಿ ಪುಟ್ಟಿದಳಿತ್ತಲ್

ಭೂತಪರ್ವತದ ತಾಪಸರನುಜಂಗಾಪತ್ತಂ ಮಾಡುವವಂ ಕೋಪಿಸಿದೊಡೆಮಗವಿಾ ಖಳಂ ಮಾಡದುದೇನೆಂದು ಬಗೆದು ಕಮಠನನಲ್ಲಿಂದಂ ಕಳೆಯೆ

ಜಗತೀವಿಶ್ರುತ ದೇವಸಿಂಧು ಹಿಮವಚ್ಛೈಲಾಗ್ರದೊಳ್ಪುಟ್ಟಿಯುಂ
ಪುಗುವಂತಾದಮಸೇವ್ಯಮಾದ ಲವಣಾಂಭೋರಾಶಿಯಂ ಪೊಕ್ಕನಾ
ಕುಗತಿಪ್ರಾಪ್ತನೆನಿಪ್ಪನುತ್ತಮಕುಲಪ್ರೋದ್ಭೂತನಾಗಿರ್ದಡಂ
ಪುಗುಗುಂ ನೀಚರನೆಂಬಿನಂ ಕಮಠನುದ್ಯತ್ಕ್ರೋಧರಂ ವ್ಯಾಧರಂ ೫೪

ಅಂತು ಬೇವಿನಮರನಂ ಕೈಪೆಸೊರೆ ಪೊರ್ದುವಂತೆ ನಿಜಾಚಾರಂ ನಿಜಾಚಾರರಪ್ಪ

ಶಬರರೊಳೊಂದಿಪೂರನಿಜಾವಲ್ಲಿ ನಿಶಾತಶತಾಸ್ತ್ರಘಾತದಿಂ
ದವಿರಳರಕ್ತಧಾರೆ ನಿಜಕೋಪದವೊಲ್ಪೊಣ್ಮೆ ಜೀವನಂ
ತವುತರೆ ಪಾಪಕರ್ಮಕಮಠಂ ಗಜಭೂಷಣ ವಜ್ರಘೋಷನು
ದ್ಭವಿಸಿದ ಸಲ್ಲಕೀವನದೊಳಾದನಮಂ ವಿಷಕುಕ್ಕುಟೋರಗಂ ೫೫

ಅಂತು ಮರುಭೂತಿಯುಂ ಕಮಠನುಂ ವಾರಣಮುಂ ಕುಕ್ಕುಟೋರಗನುಮಾಗಿ ಬಳೆಯುತ್ತುಮಿರ್ಪುದುಮಿತ್ತಲ್ ಅರವಿಂದ ಮಹಾರಾಜಂ ರಾಜ್ಯಪರಿತ್ಯಾಗಂಗೆಯ್ದು ಸಂಯತನಾಗಿ ಸಾರ್ಥದೊಡನೆ ಸಮ್ಮೇದಗಿರಿಯ ತೀರ್ಥಮಂ ಬಂದಿಸಲೆಂದು ಪ್ರತಿಮಾಯೋಗದೊಳಿರೆ ವಜ್ರಘೋಷಗಂಧಹಸ್ತಿ ಸಲ್ಲಕೀವನದೊಳ್ ವಿಹಾರಿಸುತ್ತುಮವರಂ ಕಂಡು ಕೊಲಲ್ಬಗೆದು

ಮುನಿವಕ್ಷಸ್ಥಿತಮುಂ ಸ್ವಕೀಯ ಹಿತಮುಂ ಶ್ರೀವತ್ಸವಿಖ್ಯಾತಲಾಂ
ಛನಮುಂ ತತ್ತ್ವವಿವೇಕಲೋಚನಮುಮಾತ್ಮಾತೀತಜನ್ಮಪ್ರಕಾ
ಶನಮುಂ ಸಚ್ಚಾರಿತ್ರೋಪದೇಶನಮುಮಂ ಗಳ್ಕಂಡು ಕೈಕೊಂಡು ತಾ
ನೆನಸುಂ ಶಾಂತಿಯನಪ್ರಮತ್ತನವೊಲೇಸಿರ್ದತ್ತೊ ಮತ್ತದ್ವಿಪಂ ೫೬

ರವಿರುಚಿಯಿಂದೆ ಬೆಂದಚಳಮಾಗಳೆ ನೀಳಘನಂಗಳಿಂದಮಾ
ಱುವವೊಲುದಗ್ರ ಕೋಪವಶಮಾಗಳೆ ತತ್ತುಪಶಾಂತಮಾದುದೊ
ಪ್ಪುವ ಕರಿ ಕಾಲಲಬ್ಧಿವಶದಿಂ ಕ್ಷಣದಗ್ಗಳವಾತ್ಮನಲ್ಲಿ ಪು
ಟ್ಟುವ ಪರಿಣಾಮಮುಮಪ್ಪದಿರದೆಂಬ ಜಿನೋಕ್ತಿಯೆ ಸತ್ಯಮಪ್ಪಿನಂ ೫೭

ಅಂತು ಜಾತಿಸ್ಮರನಾಗಿ ಭವ್ಯಜಾತಿಜಾತರೂಪಧರರ ಪಾದಪಯೋಜಾತಕ್ಕೆ ಪೂರ್ವಭವದ ನಿಜಸ್ವಾಮಿಯೆಂಬುದನಱದೆಱಗಿರ್ಪುದುಮವಱ ಮುನ್ನಿನ ತೀವ್ರತೆಯುಮಂ ಬೞಿಕ್ಕಾದುಪಶಮಭಾವಮುಮಂ ಕಂಡು ಕರಿಪತಿಗವರಿಂತೆಂದರ್

ಮಾತಂ ಕೇಳದೆ ಮುಂ ಮರು
ಭೂತಿಯಸೀತಿಯೊಳೆ ನಡೆದು ಪುಟ್ಟಿದೆ ತಿರ್ಯ
ಗ್ಜಾತಿಯೊಳವಿವೇಕಮೆ ಸುಖ
ಘಾತಕಮಱವೊಂದೆ ದೇಹಿಗಪ್ಪುದು ಸುಖದಂ ೫೮

ಒಂದಾರ್ತದಿನೊಗೆದಘದಿಂ
ದಂ ದುರ್ಗತಿವಡೆದೆಯೆಂದೊಡವಿರಳ ಹಿಂಸಾ
ನಂದನದಿನಾರ್ತರೌದ್ರದಿ
ನೊಂದುವ ದುಷ್ಕರ್ಮದಳವನಾರ್ವಣಿಸುವರ್ ೫೯

ಎನೆ ವಿನಯವಿನತವಿಭಪತಿ
ಮುನಿಪತಿಯ ಮುಖಾರವಿಂದಮಂ ನೋಡಲ್ಕೆ
ಟ್ಟನೆ ನಾಣ್ಚಿತಂತೆ ಸಜ್ಜನ
ಗನುಚಿತವರ್ತನಮೆ ಲಜ್ಜೆಯಂ ಮಾಳ್ಪುದೆ[ನ]ಲ್ ೬೦

ಆಗಳಾ ಕಾರುಣ್ಯರಸಾರ್ದ್ರಮುನಿಕುಂಜರರ್ ಕುಂಜರಂಗೆ ಮತ್ತಮಿಂತೆಂದರ್

ಅಂದಱಿಯದೆಸಗಿದನಯ
ಕ್ಕಿಂದೀ ತೆಜದಿಂದಮುಬಲುತಿರ್ದಡೆ ನಿನಗೇ
ವಂದಪುದೊ ಪ್ರೋಪ ತೊಱೆಯುಂ
ಪಿಂದಣ್ಗಟ್ಟುವರೆ ಧರ್ಮಮಂ ನೆನೆ ಮನದೊಳ್ ೬೧

ಪರಮಾರ್ಥಂ ಪರಮೋಪಶಾಂತಿಗೆ ನಿದಾನಂ ಜೈನಧರ್ಮಕ್ಕುದಾ
ಹರಣಂ ನೀನಿತರಕ್ಕುದಾಹರಣನಾ ನಿನ್ನಗ್ರಜನ್ಮಂ ದುರಾ
ಚರಣಂ ಚಂದ್ರಮನಂ ತಮಂ *ವಿಮಳಂ ನಿಷ್ಕಾರಣಂ ಪೀಡಿಪಂ
ತಿರೆ ನಿನ್ನಂ ಬಿಡದೆಯ್ದೆ ಪೀಡಿಸುತಮಂ ದುಃಸ್ಥಾನದೊಳ್ಪುಟ್ಟುಗುಂ ೬೨

ಕಮಠಂ ಕುಕ್ಕುಟಸರ್ಪನುಗ್ರಭಯಕೃದ್ಧೂಮಪ್ರಭೋ[ತ್ಥ]ಂ ಮಹಾ
ಹಿಮವಚ್ಛೈಳ ಮಹಾಹಿ ಷಷ್ಠನರಕೋರ್ವೀನಾರಕಂ ವ್ಯಾಧನ
ಪ್ರಮದುಃಖಾಬ್ಧಿ ತಮಃಪ್ರಭಾವನಿಭವಂ ಕಂಠೀರವಂ ಷಷ್ಠಭೂ
ಭ್ರಮಿತಂ ತೀವ್ರತಪಸ್ವಿ ದೈತ್ಯನೆನೆ ಕೇಳ್ದುಃಖಕ್ಕೆ ಪಕ್ಕಾದಪಂ ೬೩

ಆ ದುರ್ಗತಿಭಾಜನಂ ನಿಸರ್ಗಕೋಪದಿಂ ನಿನಗೆಸಗುವುಪಸರ್ಗಂ ಸುವರ್ಣಕಗ್ನಿಸಂಯೋಗಂ ವರ್ಣೋತ್ಕರ್ಷಮಂ ಪಡೆವಂತುತ್ತರೋತ್ತರ ಸುಖಪ್ರದಮನೊದವಿಸುತ್ತಂ ಸಕಲಕಳಂಕನಿರ್ಮುಕ್ತಿಪದಮಂ ಕೆಲವೆ ಭವದೊಳೆ ಪಡೆಗುಮದೆಂತೆನೆ

ಅಭಿಜಾತಂ ಮರುಭೂತಿ ಭಪ್ರಗುಣಮಾತಂಗಂ ಸಹಸ್ರಾರ ಕ
ಲ್ಪಭವಂ ಖೇಚರನಚ್ಯುತಂ ನೃಪವರಂ ಗ್ರೈವೇಯಕೋದ್ಭಾಸಿ ಭೂ
ವಿಭುವಾನಂದಕನಾನತೇಂದ್ರನಮರೇಂದ್ರಾಹೀಂದ್ರ ಭೂಪೇಂದ್ರ ವ
ಲ್ಲಭ ಪಾರ್ಶ್ವಾಧಿಪನಾಗಿ ನೀನೆ ಪಡೆವೈ ಸತ್ಸೌಖ್ಯಸನ್ಮೋಕ್ಷಮಂ ೬೪

ಎಂದಿಂತು ಪೇೞೆ

ಸಕಳ ಶ್ರಾವಕ ವಿಶ್ರುತವ್ರತಮನಾ ನಾಗಕ್ಕೆ ಸಮ್ಯಕ್ತ್ವಪೂ
ರ್ವಕಮಾಗಿತ್ತು ಮುನೀಶ್ವರರ್ಮಗುೞೆ ನಾನಾ ತೀರ್ಥಮಂ ಪುಣ್ಯಸಾ
ಧಕಮಂ ಬಂದಿಸಲೆಂದು ಪೋದರಿಭಮುಂ ತಾಂ ಮಾಡಿದತ್ಯುಗ್ರ ಪಾ
ತಕಮಂ ಚಿಂತಿಸಿ ನೊಂತಡಲ್ಲದಿದನಿನ್ನೇತುಂ ಗೆಲಲ್ಬರ್ಕುಮೇ ೬೫

ಎಂದಾ ಸಿಂಧುರವರಮರವಿಂದಮುನೀಂದ್ರಪ್ರಪರಮಕಾರುಣ್ಯದಿನಿತ್ತ್ತ್ತ್ರ
ತ್ರಮವ್ರತವಿತ್ತಮುಂ ಚಿತ್ತದೊಳ್ತಾಳ್ದಿ ತತ್ಪರಿರಕ್ಷಣ ಪ್ರವರ್ಧನತತ್ಪರನಾಗಿ
ರ್ದೊರ್ಮೆ ವೇಗವತಿಯೆಂಬ ತೊಱೆಯ ತಡಿಯ ಕರ್ದಮದೊಳ್ಬಿರ್ದು
ಪೊಱಮಡಲಾಱದಿರೆ ಪೂರ್ವಭವವೈರದಿಂ

ಕಮಠಚರ ಕುಕ್ಕುಟೋರಗ
ಮುಮುರ್ದಿರೆ ಮಸ್ತಕಕೆ ವಾರಣಾರಿಯ ತೆಱದಿಂ
ದಮೆ ಪಾಯ್ದು ಕೊಂಡೊಡದಱ ವಿ
ಷಮ ವಿಷಮಾವರಿಸೆ ತನ್ನನವಹಿತಚೇತಂ ೬೬

ಪರಮ ಸಹಾಯನಾದುದಘದುರ್ದಮ ಕರ್ದಮ ನಿರ್ಗಮಕ್ಕಿದಂ
ಬುರುತರ ಕಾಂತಿ ತನ್ನೊಳಿರೆ ತಾನಘಕರ್ದಮಮಂ ಜಿನಕ್ರಮಾಂ
ಬುರುಹ ನಖಾಂಶು ನಿರ್ಮಳ ಕರಾಂಬುಗಳಿಂ ತೊಳೆವಂ ದಲೆಂದು *
* * * ಜಿನೇಂದ್ರ ಚಾರುಚರಣಸ್ಮರಣಂ * * * * * * * ೬೭

ಒಡಲುಮನಾ ಕರ್ದಮದೊ
ಳ್ದಿಡಿಯಿಸೆ ಬೇರ್ಕೆಯ್ದು ನಿಜದ ಭಾವನೆ ಮನದೊ
ಳ್ತೊಡರ್ದಿರೆ ಕರ್ಮದ ತೊಡರಂ
ತೊಡರಂ ಪಱಿವಂತೆ ಪಱಿದುದಾ ಗಜರಾಜಂ ೬೮

ಜೈನಪದಂಬಿಡಿದು ಸುಖ
ಸ್ಥಾನಮರಪದವಿಗಾನೆ(?) ಬಿರ್ದಡೆ ತನ್ನಂ
ತಾನೆ ನೆಗವುವುದೆನಿಪ್ಪುದ
ನಾ ನಾಗಂ ನನ್ನಿ ಮಾಡಿ ನೆಗಪಿತು ತನ್ನಂ ೬೯

ಅಗ್ಗಳಮಪ್ಪ ವಿದ್ಯೆ ಕುಲಮೆಂಬಿವು ದರ್ಶನಶುದ್ಧಿಯಿಲ್ಲದಿ
ರ್ದಗ್ಗನೊಳಪ್ಪುದಲ್ತೆ ವಿಫಳಂ ಮರುಭೂತಿಗಿವಿರ್ದುಮಾಯ್ತು ತಿ
ರ್ಯಗ್ಗತಿಯಂತಮಿಲ್ಲದ ಕುಯೋನಿಯೊಳಂ ಜಿನಭಕ್ತಿಯೊಂದಱಿಂ
ಸಗ್ಗಮದಾಮದಂತದಱಿ[ನಾ]ರ್ಜಿಸುಗೂರ್ಜಿತ ಜೈನಭಕ್ತಿಯಂ ೭೦

೩. ಶಶಿಪ್ರಭ — ೪. ರಶ್ಮಿವೇಗ

ಗಜರಾಜನಿಂತು ಕಮಠಂ ಕುಕ್ಕುಟಸರ್ಪನಾಗಿ ಕೊಲೆ ಸತ್ತು ಸಹಸ್ರಾರಕಲ್ಪದೊಳ್ ಶಶಿಪ್ರಭನೆಂಬ ದೇವನಾಗಿ ಪುಟ್ಟಿ ಷೋಡಶಸಾಗರೋಪಮಾಂತದೊಳಲ್ಲಿಂ ಬಂದು

ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಲಾವತಿ ವಿಷಯದ ವಿಜಯಾರ್ಧದ ತ್ರಿಲೋಕೋತ್ತಮ ನಗರಮನಾಳ್ವ ವಿದ್ಯಾಧರ ವಿದ್ಯುದ್ಗತಿಗಮಾತನರಸಿ ವಿದ್ಯುನ್ಮಾಲೆಗಂ ರಶ್ಮಿವೇಗನೆಂಬ ಮಗನಾಗಿ ನವಯೌವನಪ್ರಾರಂಭದೊಳ್

ಮಾರಂ ಮಿಗೆ ಚಿತ್ತಗೃಹ
ದ್ವಾರಮನೊಳಪುಗಲೆ ಬಗೆಯೆ ವೈರಾಗ್ಯಗುಣಂ
ಬಾರಿಸಿದುದು ಚತುರಪ್ರತಿ
ಹಾರನ ತೆಱದಿಂ ಕುಮಾರಕಂಠೀರವನಾ ೭೧

ಆಗಳಾತಂ

ಅನುಭವಿಸುವೊಡಿಂದ್ರಿಯ ಸುಖ
ಮನಿತುಂ ಸ್ವರ್ಗದೊಳೆ ಸುಲಭಮಾ ದಿವಿಜರ್ಗಂ
ಜನಿಯಿಸುಗುಮಸುಖಮುತ್ಕೃದೊ
ಳೆನೆ ಸುಖಮಂ ಬಯಸುವಂಗೆ ಶಿವಪದಮೆ ಪದಂ ೭೨

ತಪಮಿಲ್ಲದೊಡದು ಸಾರದು
ತಪಮಿಂದ್ರಿಯಜಯಮೆ ತಜ್ಜಯಂ ಜವ್ವನದೊ
ಳ್ತಪಮಂ ತಳೆವಂಗಕ್ಕುಂ
ತಪಮಂ ಜವ್ವನದೊಳದಱಿನಾಂಪುದು ಚದುರಂ ೭೩

ಎಂದು ಬಗೆದಾ ರಶ್ಮಿವೇಗಂ

ಸುದೃಢೋದಗ್ರಚರಿತ್ರಮೋಹಸಿಗಳಂ ವೈರಾಗ್ಯಮೆಂಬೊಂದು ಚೇ
ಣದೆ ವಿಚ್ಛೇದಮನೆಯ್ದು ತನ್ನ ಗುಣಮಂ ನಿರ್ಬಂಧದಿಂದಂ ಸಭಾ
ಸದರೆಲ್ಲರ್ಪರಿಕೀರ್ತಿಸುತ್ತಿರೆ ಪರಿಚ್ಛೇದೋ ಹಿ ಪಾಂಡಿತ್ಯಮೆಂ
ಬುದನಾದಂ ದಿಟಮಾಗೆ ಮಾಡಿ ತೊಱೆದಂ ವಿದ್ಯಾಧರೈಶ್ವರ್ಯಮಂ

ಇಂತು ತೊಱೆದಂಬರೇಚರಂ ಸಮಾಧಿಗುಪ್ತಮುನಿಯರ ಪಕ್ಕದೆ ದಿಗಂಬರದೀಕ್ಷೆಯಂ ತಾಳ್ದಿ ಸರ್ವತೋಭದ್ರಂ ಮೊದಲಾದ ನೋಂಪಿಗಳಂ ನೋಂತೊಂದು ದಿವಸಂ ಹಿಮಗಿರಿಗುಹೆಯೊಳ್ ಪ್ರತಿಮಾಯೋಗದೊಳಿರಲಿತ್ತಲ್

[ಪಱುಗಱಿದ] ಪಾಪಮಂ ತಾಂ
ಕಱಿವಿನಮಾ ತೆಱದೆ ನೆರಪಿ ಪಾಪದ ಭರದಿಂ
ದಿಱಿವಂತೆ ಜೀವಿತಾಂತ್ಯದೊ
ಳಿಱಿದುದು ಗಱಗಱನೆ ನರಕವರೆಗೆ ತಮರಗಂ ೭೫

ಕಮಠಚರ ಕುರ್ಕುಟೋರಗ
ಮಮಿತಾಖಿಳದುಃಖಧಾಮ ಧೂಮಪ್ರಭೆಯೊಳ್
ನಮೆದಲ್ಲಿಂ ಬಂದು ಮಹಾ
ಹಿಮವದ್ಗಿರಿಯೊಳ್ಮಹಾಹಿಯಾದುದು ಮಗುೞ್ದಂ ೭೬

ಅಂತಜಗರನಾಗಿ

ಭವಬದ್ಧಕ್ರೋಧಂ ಸಂ
ಭವಿಸಿರೆ ಭವವಾರ್ಧಿವರ್ಧನೋದ್ಯೋಗಪರಂ
ಭವಹಾರಿಯೆನಿಪ ಮುನಿಪತಿ
ಗೆ ವಿಶೇಷಂ ಮುನಿವುದುಚಿತಮೆನೆ ಮುನಿದೆನಸುಂ ೭೭

ಅಹಿ ತನ್ನಂ ನುಂಗಿದಡೇ
ನಹಿತಂ ತನಗೆಂದು ಬಗೆದನೇ ಮುನ್ನಿದಾರ್
ಗುಹೆಯಿಂದಹಿಮುಖಗುಹೆಯೊಳ
ಗು ಹಿತಂ ತನಗೆಂದು ಬಗೆದನೇಂ ಗುಣನಿಧಿಯೋ ೭೮

ಕ್ರೂರಮಹಾಹಿ ನುಂಗುತಿರೆ ತನ್ಮುಖದಿಂದಮುಗಲ್ವ ಚಿತ್ತಮಂ
ತಾರದೆ ದಿವ್ಯಯೋಗಿ ನಿಜಯೋಗದಿನುಗ್ರ***ಕಾಳಕಾ
ಳೋರಗತೀವ್ರವಕ್ತ್ರದಿನಗಲ್ವದಟಿಂ ಗೆಡೆಗೊಂಡು ನಿಶ್ಚಳಂ
ಘೋರತರೋಪಸರ್ಗಮನೆ ಸೈರಿಸಿದಂ ಗಡ ಧೀರರನ್ನರಾರ್ ೭೯

ಚ್ಯುತಿಯುಳ್ಳ ತನುವನುಬೀದ
ಚ್ಯುತಮೆನಿಪಾತ್ಮಸ್ವರೂಪಮಂ ಭಾವಿಸಿಯು
ಚ್ಯುತನಪ್ಪುದುಚಿತಮೆನೆಯು
ಚ್ಯುತೇಂದ್ರನಾದಂ ಖಗೇಂದ್ರನಪ್ಪ ಮುನೀಂದ್ರ ೮೦

೫ ಅಚ್ಯುತೇಂದ್ರಂ — ೬. ವಜ್ರನಾಭಿ ಚಕ್ರವರ್ತಿ

ಇಂತು ರಶ್ಮಿವೇಗನಚ್ಯುತಕಲ್ಪದ ಪುಷ್ಕರವಿಮಾನದೊಳ್ಪುಟ್ಟಿ ದ್ವಾವಿಂಶತಿಸಾಗರೋಪಮಾಂತದೊಳಲ್ಲಿಂ ಬಂದು

ಜಂಬೂದ್ವೀಪದಪರವಿದೇಹದ ಪದ್ಮವಿಷಯದಶ್ವಪುರಮನಾಳ್ವ ವಜ್ರವಿಜಯಂಗಂ ವಿಜಯೆಗಂ ವಜ್ರನಾಭಿಯೆಂಬ ಮಗನಾಗಿ ಚಕ್ರವರ್ತಿಪದದೊಳ್ನಿಂದು ಕ್ಷೇಮಂಕರಭಟ್ಟಾರಕರಲ್ಲಿ ಧರ್ಮಮಂ ಕೇಳ್ದು ನಿರ್ವೇಗದಿಂ ಮಗಂಗೆ ರಾಜ್ಯಮಂ ಕೊಟ್ಟು ಪಲರ್ವೆರಸು ಸಂಯಮಧರನಾಗಿ ತ್ರಿಕಾಲದೊಳಾತಪಯೋಗದೊಳ್ನಿಲ್ವುದುಂ

ಮುನ್ನಿನ ಜನ್ಮದೊಳಜಗರನಾಗಿ ಮುನಿಪುಂಗವನಂ ಮುನಿಸು ನುಂಗಿದ ಪಾಪದ ಪರಿಪಾಕದಿಂ ಬಱಸಿಡಿಲ್ಪೊಡೆಯೆ ಶತಜೂರ್ಣಶರೀರನಾಗಿ ಪೋಗಿ ತಮಃಪ್ರಭೆಯೊಳಿರ್ಪತ್ತೆರಡು ಸಾಗರೋಪಮಂಬರಮೆ ಮೆಯಿಕ್ಕುವನಿತು ಪೊೞ್ತು ತೆಱಪಂ ಪಡೆಯದೆ ಪಲತೆಱದ ದುಃಖಮನನವರತಮನುಭವಿಸಿ ಬಂದು ಕುರಂಗಕನೆಂಬ ಬೇಡನಾಗಿ 'ನೀಚವರ್ತನಯುತನಾದನಾರವನಪ್ರೊಲ್ವಿಪರೀತಚರಿತ್ರರುರ್ವಿಯೊಳ್' ಎನಿಸಿ ಕೃತಾಂತನಂತೆ ಜಳಸ್ಥಳನಭಸ್ಥಳಚರಂಗಳಪ್ಪ ಜೀವಂಗಳನೋವದೆ ಕೊಂದುಂ ತಣಿಯದೆ ದೆಸೆಗಳನವ್ವಳಿಸಿ ನೋಡುತ್ತುಂ

ವಿಪುಳಾಚಳದೊಳ್ ಯೋಗನಿಯೋಗದೊಳಿರ್ದಾ ಯೋಗೀಶ್ವರರಂ ಕಂಡು ಪರಿತಂದು ಭವಬದ್ಧಕ್ರೋಧದಿಂ ಭವನಂತೆ ವನೇಚರಂ ವಿಷಮಲೋಚನನಾಗಿ ನುಂಗುವಂತೆ ನೋಡಿ 'ಮುನಿಯ ತನುವನೊದವಿದ ಮುನಿಸಿಂ ಗುಱಿಮಾಡಿ ನೆಱೆಯದಘಮಂ ನೆಱಪುವೆನಾನೆಂಬ ತೆಱದೆ ತೆಗೆನೆಱೆದೆಚ್ಚಂ'

ಕರಚಕ್ರವಿಟ್ಟು ಖಂಡಿಸು
ತಿರೆ ಶಬರಂ ತನುವನಾಮೆ ಬೇಕೆಯ್ದೆಡೆಯೊಳ್
ನೆರವಾದನೆಂದೆ ಯತಿಪತಿ
ಪರಮಧ್ಯಾನದೊಳೆ ನಿಂದನೇಂ ಧೃತಿಯುತನೋ ೮೧

ಶಲ್ಯಂಗಳಿರ್ದಡಂ ವೈ
ಕಲ್ಯಕ್ಕೆಡೆಗುಡದೆ ಧೃತಿಯುನವಳಂಬಿಸಿ ನಿ
ಶ್ಶಲ್ಯೋವ್ರತಿಯೆನಿಸಿದ ವಾ
ತ್ಸಲ್ಯಪರಂ ಪರಮತತ್ವಮಂ ಭಾವಿಸಿದಂ ೮೨

೭. ಅಹಮಿಂದ್ರಂ — ೮. ಆನಂದಕುಮಾರಂ

ಅಂತಾ ತಪೋಧನಂ ನಿರ್ಮಳಾಂತರಂಗಧ್ಯಾನಪರನಾಗಿ ಸಮಾಧಿಯೆಯ್ದಿ ಮಧ್ಯಮಗ್ರೈವೇಯಕದ ಶುಭವಿಮಾನದೊಳಹಮಿಂದ್ರನಾಗಿ ಸಪ್ತವಿಂಶತಿ ಸಾಗರೋಪಮಾಂತದೊಳಲ್ಲಿಂ ಬಂದು

ಜಂಬೂದ್ವೀಪದ ಭರತದ ಕೋಸಲವಿಷಯದ ವಿನೀತಪುರಮನಾಳ್ವಿಕ್ಷ್ವಾಕುವಂಶದ ಕಾಶ್ಯಪಗೋತ್ರದ ವಜ್ರಬಾಹು ಮಹಿಪತಿಗಂ ಪ್ರಭಂಕರಿಗಮಾನಂದನೆಂಬ ಮಗನಾಗಿ ಮಹಾಮಂಡಳಿಕ ಪದವಿಯೊಳ್ನಿಲ್ತು ಮತ್ತೊಂದು ದಿವಸಂ ಸ್ವಾಮಿಹಿತನೆಂಬ ಮಹಾಮಂತ್ರಿ ಪೇೞೆ ಫಾಲ್ಗುಣ ನಂದೀಶ್ವರದ ಯಾತ್ರಾದಿನದೊಳ್ ಜಿನಪೂಜೆಯಂ ಮಾಡಿ ತತ್ಪೂಜೆಯಂ ನೋಡಲೆಂದು ಬಂದ ವಿಪುಳಮತಿಯೆಂಬ ಗಣಧರರಂ ವಿನಯದಿಂ ಬಂದಿಸಿ ಧರ್ಮಮಂ ಕೇಳ್ದು ತದನಂತರಮರಸಂ

ಜಿನಬಿಂಬಮಚೇತನಮೆಂ
ತು ನಿಗ್ರಹಾನುಗ್ರಹಕ್ಕೆ ನಾಯಕಮಕ್ಕುಂ
ಮುನಿಪಾರಾಧಿಸುವ ಜನ
ಕ್ಕೆನಗಿದು ವಿಸ್ಮಯಮದಂ ತಿಳಿಪು ಮುನಿತಿಳಕಾ ೮೩

ಎಂದುದರ್ಕಾ ಮುನಿಪತಿಗಳಿಂತೆಂದರ್

ಈ ಪೊೞಲೊಳ್ತಪಮುಮಭಯದಾನಮುಂ ಶಾಸ್ತ್ರದಾನಮುಂ ಮುನ್ನಮಾದಿದೇವನಿಂ ಪ್ರವರ್ತಿತಮಾಗೆ ಭರತರಾಜಂ ಜಿನಭವನಪೂಜಾದಿಶ್ರಾವಕನಿಯೋಗಮಂ ತೋಱಿದಂ ಹಸ್ತಿನಪುರದೊಳ್ ಶ್ರೇಯಾಂಸನಾಹಾರ ದಾನಮಂ ನೆಗೞ್ಚಿದೊನದಱಿಂ ಭರತನಂತೆ ನಮಿಜಿನಪೂಜಾಫಲಮನನುಭವಿಸುವೆ ಕಲ್ಪವೃಕ್ಷಮುಂ ಚಿಂತಾಮಣಿಯುಮೆಂಬುವಚೇತನಂಗಳಾಗಿಯುಂ ಮನೋಭಿಲಷಿತಮಾಗೆ ಫಲಪ್ರದಂಗಳಂತೆ ಜಿನಭವನ ಪ್ರತಿಮೆಗಳುಮಚೇತನಂಗಳಾಗಿಯುಂ ಸಾಕ್ಷಾತ್ಪುಣ್ಯಬಂಧಹೇತುಗಳುಂ ಶುಭಪರಿಣಾಮೋತ್ಪತ್ತಿಕಾರಣಂಗಳುಮಕ್ಕುಂ ರಾಗದ್ವೇಷಮೋಹಮಿಲ್ಲದುದಱಿಂ ದಾಭರಣಾಯುಧಾದಿವಿಮುಖನುಂ ನಿರತಿಶಯಾನಿಂದ್ರಿಯವಿಬೋಧನಾಗಿ

ಕೃತಾರ್ಥನಪ್ಪುದಱಿಂ ಜಟಾಜಿನಾದಿ ವೇಷವಿರಹಿತನುಮಪ್ಪ ಜಿನಪತಿಯ ಪ್ರತಿಬಿಂಬದರ್ಶನದಿಂವಲ್ಲದೆ ಶುಭಪರಿಣಾಮಪ್ರಕರ್ಷಣಮಾಗದು ಪುಣ್ಯ ಪಾಪ ಬಂಧಕ್ಕೆ ಬಾಹ್ಯಾಭ್ಯಂತರ ಸನ್ನಿಧಾನಂ ಕಾರಣಮೆಂದಱಿಪಿ ಜಿನ ಪ್ರತಿಬಿಂಬಕಥಾಪ್ರಸಂಗದಿಂ ಭುವನಚೈತ್ಯಾಲಯವರ್ಣಾಭಿಪ್ರಾಯ ದೊಳ್ ಮುನ್ನಂ ಜ್ಯೋತಿರ್ಲೋಕದಾದಿತ್ಯವಿಮಾನಗತಜಿನಭವನವಿಭೂತಿ ಯನಸಾಧಾರಣಂ ಮಾಡಿ ಮುನಿಪತಿ ಪೇೞೆ ಪಿರಿದುಂ ರುಚಿಯಾಗಿ ಜಿನ ಭವನಂಗಳಂ ಮಾಡಿ ಸೂರ್ಯೋದಯಾಸ್ತಮಯ ಸಮಯದೊಳಾದಿತ್ಯ ಬಿಂಬದರ್ಹದ್ಭಟ್ಟಾರಕಂಗೆ ಶಾಸ್ತ್ರೋಕ್ತಕ್ರಮದಿಂ ನಿತ್ಯಪೂಜೆಯುಮನ ಷ್ಟಾಹ್ನಿಕಮುಂ ಚತುರ್ಮುಖಮುಂ ಕಲ್ಪವೃಕ್ಷಮುಂ ರಥಾವರ್ತನಮುಂ ಸರ್ವತೋಭದ್ರಮುಮೆಂಬೀ ಪೂಜೆಗಳಂ ಮಾಡುತ್ತಂ ಜಿನಬಿಂಬಂಗಳಂ ತ್ರಿಕಾಲಮರ್ಚಿಸುತ್ತಮಾನಂದ ನರಪತಿ ರವಿಬಿಂಬದ ಜಿನಬಿಂಬಕ್ಕೆ ಪೊಡೆ ವಡುವುದುಂ ಕಂಡದನೆ ಪ್ರಮಾಣಂ ಮಾಡಿ ತತ್ವಮನಱಿಪರುಮಱಿ ಯದವರುಮಂದಿಂಬೞಿಯುಮಾದಿತ್ಯಬಿಂಬಮನೆ ಪೂಜಿಸಲ್ತಗುಳ್ದರ್

ಮತ್ತೊಂದು ದಿವಸಮಾನಂದಂ ತನ್ನ ತಲೆಯ ನರೆಯಂ ಕಂಡದುವೆ ನಿರ್ವೇಗಮಾಗೆ ಮಗಂಗೆ ರಾಜ್ಯಮನಿತ್ತು ಸಮುದ್ರಗುಪ್ತ ಯತಿಯರ ಪಕ್ಕದೆ ಪಲರ್ವೆರಸು ಸಂಯಮಮಂ ಕೈಕೊಂಡು ಸಮ್ಯಗ್ದರ್ಶನಜ್ಞಾನ ಚಾರಿತ್ರಮೆಂಬಿವಱಿಕೊಳ್ನೆಗಲ್ವೇಕಾದಶಾಂಗಧರಂ ಷೋಡಶಭಾವನೆಗಳಿಂ ತೀರ್ಥಕರಪುಣ್ಯಮಂ ಕಟ್ಟಿ ಕ್ಷೀರವನದೊಳ್ಪ್ರಾಯೋಪಗಮನವಿಧಿಯಿಂ ಪ್ರತಿಮಾಯೋಗದೊಳಿರೆ

ಶುಭಯೋಗಭಾಗಿ ಯೋಗಿ
ಪ್ರಭುವಧೆಯಿಂದಾದ ಪಾಪದಿಂ ದುಃಖದವ
ಪ್ರಭವಾಟವಿಯೆನಿಪ ತಮಃ
ಪ್ರಭೆಯೊಳ್ಜನಿಯಿಸಿ ಕುರಂಗನತಿಮಳಿನಾಂಗಂ ೮೪

ಅನುನಿರಂತರಂ ಘೋರಕ್ಲೇಶಮನನುಭವಿಸಿ ಬಂದು ಸಿಂಹಮಾದ ನದೆಂತೆನೆ

ಆ ಕ್ಷೀರವನದೊಳತಿ ರೌ
ದ್ರಾಕ್ಷಂ ಗಜಪತಿ ಗಜಾಸುರೋನ್ಮದವಿದಳ
ತ್ರ್ಯಕ್ಷಂ ಜನಿಯಿಸಿದುದು ಹ
ರ್ಯಕ್ಷಂ ಘನವನ ಮೃಗಾಳಿ ಸಂಹೃತಿದಕ್ಷಂ ೮೫

ಇಂತು ಮುಂಪೇಳ್ದ ವ್ಯಾಧನೇೞನೆಯ ನರಕದಿಂ ಬಂದು ಸಿಂಹಮಾಗಿರ್ದಾಗಳ್ ಪೂರ್ವವೈರದ

ಮುನಿಸಿಂ ಹರಿ ಮೇಲ್ವಾಯ್ದೊಡೆ
ಮುನಿಸಿಂಹನದಕ್ಕೆ ಚಳಿಯಿಸದೆ ತತ್ತ್ವಾರಾ
ಧನದೊಳ್ಸಮಗ್ರಸುಖಸಾ
ಧನದೊಳ್ನಿಂದಂ ವಿವೇಕಿಗದು ತಕ್ಕುದೆನಲ್ ೮೬

ಭೇದಿಸೆ ತನುವಂ ಸಿಂಹಂ
ವೇದನೆ ಮುನಿಗಾದುದಿಲ್ಲ ತನ್ನಿಂ ತನುವಂ
ಭೇದಿಸಿ ತನ್ನೊಳ್ನಿಂದನ
ನಾವ ಪರೀಷಹಸಹಸ್ರಮುಂ ಜಿವಱುಕುಮೇ ೮೭

ಸಂಚಿಸಿದಘಮಂ ಬರಿಸಿ ಪ
ಳಂಚಲೆವೆಡೆಗಾದುದಿದು ಸಹಾಯನೆನುತ್ತಂ
ಪಂಚಪದಮನೋದುತ್ತಂ
ಪಂಚಾಸ್ಯಕೃತೋಪಸರ್ಗಮುಂ ಸೈರಿಸಿದಂ ೮೮

ಪಂಚೇಂದ್ರಿಯ ಪಂಚಾಸ್ಯಂ
ಮುಂ ಚಳಿಯಿಸಲಾಱದಳಱುತೊಡನಿರ್ದುಮದಿ
ನ್ನೇಂ ಚಳಿಯಿಸಲಾರ್ಕುಮೆ ಪೇ
ಳ್ಪಂಚಾಸ್ಯಂ ಕ್ಷಣಮೆ ಪೊರ್ದಿದುದು ಯತಿಪತಿಯಂ ೮೯

ಆ ಸಮಯದೊಳ್

ಪಂಚಾನನೋಪಸರ್ಗಜ
ಯಂ ಚಿತ್ರಕೃತಿವಿಚಿತ್ರಮುಂ ಕುಡೆ ದಿವಿಜ
ರ್ಪಂಚಾಮರಮಹಿಜಕುಸುಮ
ಸಂಚಯವೃಷ್ಟಿಯೊಳೆ ಮುನಿಯ ತನುವಂ ಪುದಿದರ್ ೯೦

೯. ಆನತೇಂದ್ರಂ — ೧೦. ಶ್ರೀ ಪಾರ್ಶ್ವನಾಥಂ

ಅಂತನನ್ಯಸಾಮಾನ್ಯಸಂನ್ಯಸನವಿಧಿಯಿಂ ಮುಡಿಪಿಯುಮಲ್ಲಿ ಸೌಖ್ಯಾ
ನತಕಲ್ಪದೊಳ್ಪುಟ್ಟಿ ವಿಂಶತಿಸಾಗರೋಪಮಾಯುಷ್ಯನುಂ ಮೂರೂವರೆ
ಮೊಳ ನಿಡಿಯನುಂ ಶುಕ್ಲಲೇಶ್ಯಾಪರಿಣಾಮನುಂ ದಶಮಾಸನಿಶ್ವಾಸ
ನುಂ ವಿಂಶತಿಸಹಸ್ರವರ್ಷಮಾನಸಾಮೃತಾಹಾರನುಂ ಮನಃಪ್ರವಿಚಾರ
ಸುಖನುಂ ಪಂಚಮಪೃಥ್ವೀಗತಾವಧಿಜ್ಞಾನನುಂ ಸ್ವಾವಧಿಕ್ಷೇತ್ರಪ್ರಮಾಣ
ಬಲಪ್ರಕಾಶ ಕ್ರಿಯಾಸಮರ್ಥನುಮೆನಿಸಿ ಸಾಮಾನಿಕಾದಿ ಸಮವಿಧಾಮ
ರಾನೇಕದೇವಸಹಸ್ರಪರಿವೃತನುಂ ದಿವ್ಯಸುಖಮನನುಭವಿಸುತ್ತಿರ್ಪಿನ
ಮಿತ್ತಲ್

ಜಂಬೂದ್ವೀಪದ ಭರತದ ಕಾಶಿವಿಷಯದ ವಾರಣಾಸಿಪುರಮನಾಳ್ವು
ಗ್ರವಂಶದ ಕಾಶ್ಯಪಗೋತ್ರದ ವಿಶ್ವಸೇನಮಹಾರಾಜನರಸಿ ಬ್ರಾಹ್ಮೀದೇವಿ
ವೈಶಾಖ ಬಹುಳ ಬಿದಿಗೆಯ ಬೆಳಗಪ್ಪ ಜಾವದೊಳ್ ವಿಶಾಖಾನಕ್ಷತ್ರ
ದೊಳ್ ಷೋಡಶ ಶುಭ ಸ್ವಪ್ನಮುಮಂ ನಿಜಮುಖಪ್ರವೇಶಿಗಜರೂಪಮು
ಮಂ ಕಂಡವಧಿಜ್ಞಾನಿಯಪ್ಪ ನಿಜೇಶನಿಂ ತತ್ಫಲಮನಱಿದು ಸುಖಮಿ
ರ್ಪಿನಂ

ಆನತೇಂದ್ರಂ ಸ್ವರ್ಗಾವತರಣಪೂಜಾಪೂರ್ವಕಮಾದೇವಿಯ ಗರ್ಭ
ಕ್ಕವತರಿಸೆ ನೇಮಿಭಟ್ಟಾರಕರ ತೀರ್ಥಸಂತಾನಮೆಣ್ಬತ್ತುಮೂಱುಸಾಸಿ
ರಮಯ್ನೂಱಯ್ವತ್ತು ವರ್ಷಂ ಪ್ರವರ್ತಿಸುವಂದಾ ಕಾಲದೊಳ್ ಪುಷ್ಯ
ಮಾಸದ ಬಹುಳೇಕಾದಶಿಯೊಳನಿಳಯೋಗದೊಳ್ ತ್ರಿಜ್ಞಾನಧರಂ ಪುಟ್ಟೆ

ದಿವಿಜರಾಜಂ ಜನ್ಮಾಭಿಷೇಕಕಲ್ಯಾಣಾನಂತರಂ ಪಾರ್ಶ್ವಮೆಂಬುದು
ತ್ರಿಲೋಕಪೂಜಿತಮಪ್ಪ ಧರ್ಮಮದಕ್ಕಾಶ್ರಯನಪ್ಪುದಱಿಂ ಪಾರ್ಶ್ವನೆಂಬ
ಪೆಸರನಿಟ್ಟು ಪೋಗೆ

ಶತವರ್ಷಪರಮಾಯುಷ್ಯನುಮಪಕ್ವಶಾಲಿವರ್ಣನುಂ ನವರತ್ನಿ
ಪ್ರಮಾಣೋತ್ಸೇಧನುಮೆನಿಸಿ ಬೆಳೆದು ಪದಿನಾಱು ವರ್ಷಂ ಪೋಗೆ

ಮತ್ತೊಂದು ದಿವಸಂ ಚತುರಂಗಬಲಸಹಿತಮೋಲಗಂ ಪೊಱಮಟ್ಟು ಮಗುೞ್ದು ಬರುತ್ತುಮಾಶ್ರಯಮೆಂಬ ವನದೊಳ್ತಮ್ಮಬ್ಬೆಗಳಣ್ಣಂ ಮಹೀಪಾಲ ನಗರಮನಾಳ್ವ ಮಹೀಪಾಲನೆಂಬೊನರಸಂ ಮಹಾದೇವೀವಿಯೋಗದೊಳ್ ತಾಪಸದೀಕ್ಷೆಯಂ ಕೊಂಡು ಪಂಚಾಗ್ನಿತಪದೊಳಿರ್ಪುದಂ ಕಂಡು ಕೆಲಕ್ಕೆವಂದುಸಿರದೆ ಕುಳ್ಳಿರ್ಪುದುಂ

ಆತಂಗೆ ಮಾವನೆಂ ಕುಲೀನನೆಂ ತಪೋವೃದ್ಧನೆಮೆನಗೆ ವಿನಯಂಗೆಯ್ಯಮುಸಿರದಿರ್ದನೆಂದು ಕುಮಾರಂಗೆ ಮುಳಿದು ಕೋಪದಿಂ ಕಲುಷಿತ ಹೃದಯನಾಗಿ ಕಿಚ್ಚು ನಂದಿದಡೆ ಮತ್ತಮಿಂಧನಮನಿಕ್ಕಲೆಂದು ಕೊಡಲಿಗೊಂಡು ಪುಳ್ಳಿಯಂ ಪೋೞ್ವಾಗಳ್ ಕುಮಾರನಿದಂ ಕಡಿಯಲ್ವೇಡ ಪುಳ್ಳಿಯೊಳ್ ಪ್ರಾಣಿಯಿರ್ದುದಱಿಂ ಪಾಪಕಾರಣಮೆಂದು ಬಾರಿಸೆ ಕಡಿದು ಕಿಚ್ಚಿನೊಳಗಿಕ್ಕಿದಡೆ ಪುಳ್ಳಿಯೊಳಗಿರ್ದ ನಾಗನಾಗಿಣಿಯೆರಡುಂ ನಾಲ್ಕು ಖಂಡಮಾಗೆ ಕಂಡು

ಸುಭೌಮನೆಂಬ ರಾಜಕುಮಾರನೆಂದನೆಲೆ ಗೊರವಾ ನೀಂ ತಪಸ್ವಿಯೇನೆಂದುಪಸರ್ಗಮಂ ನೋಡಿದೈ ಪಾಪಾಸ್ರವಮಾವಕಾರಣದಿಂ ಸಂಭವಿಸುಗುಮೆಂದಱಿದೆಯಿಲ್ಲ ನಿನ್ನಜ್ಞಾನದೊಳಪ್ಪ ತಪದ ಫಲಮೇನೆನೆ ಗೊರವನೆಂದಂ

ನೀಂ ಪ್ರಭು[ವಾ]ನೆಂದು [ಎ]ನ್ನ[ನ]ವಜ್ಞೆಗೆಯ್ದೆನ್ನ ತಪೋಮಾಹಾತ್ಮ್ಯಮನಱಿಯದೆ ನುಡಿದೆಯಾನಪ್ಪಡೆ ಪಂಚಾಗ್ನಿಮಧ್ಯದೊಳೂರ್ಧ್ವಬಾಹುವುಮೇಕಪಾದಸ್ಥಿತನುಮಾಗಿ ಗಾಳಿಯುಮಂ ಸ್ವಯಂಪತಿತಪರ್ಣಾದಿಗಳುಮನಾಹಾರಮಂ ಕೊಂಡು ದುರ್ಧರಮಪ್ಪ ಕಾಯಕ್ಲೇಶದೊಳ್ನೆಗೞ್ದಿನದಱಿಂದಗ್ಗಳಂ ತಪಮಾವುದೆಂಬುದುಂ

ಸುಭೌಮಂ ಮುಗುಳ್ನಗೆ ನಕ್ಕು ನಿ[ಮ್ಮಂ] ಪಿರಿಯರನವಜ್ಞೆಗೆಯ್ವ[ನಲ್ಲೆಂ] ನೊಂದೆಂ ನಿಮ್ಮಂದಿಗರಾಪ್ತಾಗಮ ಪದಾರ್ಥ ತತ್ವಂಗಳನಱಿಯದೆ ಮಿಥ್ಯಾದರ್ಶನಾಸಂಯಮ ಕಷಾಯ ಪ್ರಮಾದಾಶುಭಯೋಗದಿಂ ಪೃಥ್ವ್ಯಪ್ತೇಜೋವಾಯು ವನಸ್ಪತಿ ತ್ರಸಕಾಯಂಗಳೊಳ್

ಸಂರಂಭ ಸಮಾರಂಭದೊಳಂ ಕೃತಕಾರಿತಾನುಮೋದದೊಳಂ ಸಾವದ್ಯ ಕರ್ಮಂಗಳ್ಗೆ ಜೀವಪಾಷಂಡಿಗಳುಂ ದುರಾತ್ಮಪರಿಕಲ್ಪಿತ ಮತಾವಲಂಬಿಗಳುಂ ಮುಕ್ತಿಯುಂ ಬಯಸುವಂದಂ ನೀರೊಳ್ಬೆಣ್ಣೆಯುಱಸುವಂ[ತುಮು] ಪಾಷಾಣದೊಳ್ಪೊನ್ನನಱಸುವಂತಕ್ಕುಮದಱಿನಜ್ಞಾನಪೂರ್ವಕದಿಂ ನೆಗಳ್ದ ನಿನ್ನ ಕಾಯಕ್ಲೇಶಂ ದುಃಖಕಾರಣಮಕ್ಕುಮೆಂಬುದುಮಾ ಗೊರವಂ

ಸ್ವಪಕ್ಷಾನುರಾಗಮೂಢತ್ವದಿಂ ಕಮಠ ಜನ್ಮದ ವೈರದಿಂ ಸಂಸಾರ ಪರಿಭ್ರಮಣಂಗೆಯ್ದು ಬಂದು ಗೊರವನಾಗಿರ್ದದಱಿಂ ಸುಭೌಮನೆಂದ ಸಿನಗೆಯ್ವೆ(?)ಯೆನ್ನನೀ ಪಾರ್ಶ್ವಕುಮಾರಂ ಪರಿಭವಿಸಿದೊನೆಂದು ಕುಮಾರನೊಳಪ್ಪ ಹೃಚ್ಛಲ್ಯದಿಂ ಸತ್ತು ಜ್ಯೋತಿರ್ಲೋಕದೊಳ್ ಶಂಬರನೆಂಬ ದೇವನಾದೊಂ

ನಾಗನುಂ ನಾಗಿಣಿಯುಮುಪಶಮಭಾವನೆಯಿಂ ನಾಗೇಂದ್ರನುಂ ನಾಗಿಣಿಯುಮಾಗಿ ಪುಟ್ಟಿದರದೆಂತೆನೆ

ವರಭವನಾಮರ ಲೋಕದೊ
ಳುರಗಂ ಧರಣೇಂದ್ರನಾಯ್ತು ಪದ್ಮಾವತಿಯಾ
ಯುರಗಿ ಮಿಗೆ ಪಂಚಪದಮಂ
ಪರಿಭಾವಿಸೆ ಕೇಳ್ದು ಪಡೆದ ಪುಣ್ಯೋದಯದಿಂ ೯೧

ಇತ್ತಲಾ ಪಾರ್ಶ್ವನಾಥಂಗೆ ಮೂವತ್ತುವರ್ಷಂ ಕುಮಾರಕಾಲಂ ಸಲೆ ಮತ್ತೊಂದು ದಿವಸಂ ಸಾಕೇತಮನಾಳ್ವ ವಿಜಯಸೇನಮಹಾರಾಜಂ ಪಾಗುಡಮಂ ತನ್ನ ಮಂತ್ರಿಯ ಕೈಯೊಳಟ್ಟುವುದುಂ ಪಾರ್ಶ್ವಕುಮಾರಂ ಬಂದ ಮಂತ್ರಿಯಂ ಪೂಜಿಸಿ ಸಾಕೇತನಗರ ವಿಭೂತಿಯಂ ಬೆಸಗೊಳೆ ಸಚಿವಂ ತನ್ನ ಕೇಳ್ದಂದದಿಂ ನಗರವಿಭವವರ್ಣನಂಗೆಯ್ದಲ್ಲಿ ಪುಟ್ಟಿದಾದಿದೇವನಾದ್ಯ ಪ್ರಜಾಪತಿಯುಂ ಮುನ್ನೆ ಷೋಡಶಕಾರಣಭಾವನೆಗಳಿಂ ತೀರ್ಥಕರ ಪುಣ್ಯಮಂ ಕಟ್ಟಿ ಬಂದು ಮುಕ್ತಿಗೆ ಸಂದನೆಂಬುದುಮದಂ ಕೇಳ್ದು ಪಾರ್ಶ್ವಕುಮಾರನಾನಂದನೃಪತಿಯಾದ ಭವದೊಳ್ತಾನುಮಾಪೊಲಲೊಳೆ ಬಾಹ್ಯಾಭ್ಯಂತರಪರಿತ್ಯಾಗಂಗೆಯ್ದು ಭಾವಿತಾದ್ಯಷ್ಟಕಾರಣನಾದುದರಿಂ ತನ್ನಿ

ಮಿತ್ರವಿಜೃಂಭಿತಾಭಿನಿಬೋಧಕಜ್ಞಾನ ಪ್ರಕರ್ಷಕ್ಷಯೋಪಶಮದಿಂ ತನ್ನ ಪೂರ್ವಭವಸಂತತಿಯಂ ನೆನೆದು

ಲೌಕಾಂತಿಕದೇವರ್ ಪ್ರತಿಬೋಧಿಸೆ ಪರಿನಿಷ್ಕ್ರಮಣಕಲ್ಯಾಣಾಭಿಷೇಕಪೂರ್ವಕಂ ಸ್ಫುಟಹಿತೋಪದೇಶಯುಕ್ತಿವದ್ವಚನಂಗಳಿಂ ಬಂದು ವಿಸರ್ಜನಂಗೆಯ್ದು ವಿಮಳೆಯೆಂಬ ಸಿವಿಗೆಯೊಳಷ್ಟಮೋಪವಾಸದಿನಶ್ವತ್ಥವನಕ್ಕೆ ಪೋಗಿ ಮಣಿಶಿಳಾತಳದೊಳುತ್ತರಾಭಿಮುಖನಾಗಿರ್ದು ಪುಷ್ಯಬಹುಳೇಕಾದಶಿಯ ಪೂರ್ವಾಹ್ಣದೊಳ್ ವಿಶಾಖಾನಕ್ಷತ್ರದೊಳ್ ಮೂವದಿಂಬರರಸುಗಳ್ವೆರಸು ಸಿದ್ಧನಮಸ್ಕಾರಪೂರ್ವಕಂ ದೀಕ್ಷೆಯಂ ಕೊಂಡು ಚತುರ್ಜ್ಞಾನಧರನಾಗಿ

ಪಾರಣಾದಿನದೊಳ್ ಗುಲ್ಮಖೇಟಪುರದೊಳ್ ಶ್ಯಾಮವರ್ಣನಪ್ಪ ಧನ್ಯಸಂಭವನ ಮನೆಯೊಳ್ನಿಲ್ತು ಪಂಚಾಶ್ಚರ್ಯಮಂ ನೆಗೞ್ಚಿ ನಾಲ್ಕುತಿಂಗಳ್ ಛದ್ಮಸ್ಥಕಾಲಂ ಪೋಗೆ ದೀಕ್ಷೆಗೊಂಡ ವನದೊಳ್ ದೇವದಾರುದ್ರುಮದಡಿಯೊಳ್ ಅಷ್ಟಮೋಪವಾಸದಿನತ್ಯಂತ ಶುದ್ಧಪರಿಣಾಮದಿಂದೇೞು ದಿವಸಂ ಪ್ರತಿಮಾಯೋಗದೊಳಿರ್ಪುದುಂ

ಕಮಠಚರಂ ಬರುತ್ತಮಸುರಂ ವಿಪುಳಾದ್ರಿಯೊಳಾತ್ಮಯೋಗದು
ದ್ಯಮದೊಳೆ ನಿಂದ ಪಾರ್ಶ್ವಮುನಿನಾಥನ ಮೇಲೆ ವಿಮಾನಮಾಗಳಾ
ದಮೆ ನಭದಲ್ಲಿ ಕೀಲಿಸಿದವೋಲ್ನಿಲೆ ಸತ್ಪಥದಿಂದಗಲ್ದೊಡ
ಕ್ಕುಮೆ ದಲವಶ್ಯದಿಂ ಕುಗತಿಯೆಂಬವೋಲುರ್ವಿಗೆ ಪಾಯ್ದನುದ್ಧತಂ ೯೨

[ಅಂತು ಪಾಯ್ದು] ಶಾಂತರಸಾಂಬುರಾಶಿಯನೀಕ್ಷಿಸಿ ಅನ್ಯಜನ್ಮಸಂಸ್ಕಾರದೆ ಕೋಪಮಂ ತಳೆದು

ಕಿಡಿಯಂ ಸೂಸುವ ಕಣ್ಗಳಿಂದೆ ಸಿಡಿಲಂ ದಂಷ್ಟ್ರಾಂಶುವಿಂ ಮಿಂಚನೆ
ಲ್ಲೆಡೆಯಿಂದಂ ಬಿಡುತಪ್ಪ ಘರ್ಮಜಳದಿಂದಂ ವೃಷ್ಟಿಯಂ ಕಾಳಿಮ
ಕ್ಕೆಡೆಯಾದಂಗದ ಕಾಂತಿಸಂತತಿಗಳಿಂ ನೀಳಾಭ್ರಜಾಳಂಗಳಂ
ಪಡೆಯುತ್ತಂ ಪ್ರಳಯಾಂಬುದಾಗಮಮನಾಗಳ್ದೈತ್ಯನೇಂ ಪೋಲ್ತನೋ

ದನುಜಂ ಯಮಂಗಿವಂ ಸಂ
ದನುಜಂ ನಿರ್ದಯೆಯಿನೆಂಬಿನಂ ಪೀಡೆಯನಾ
ಮುನಿಪನುಳಿದಂಗೆ ಮಾಣದೆ
ಮುನಿಪಮಿತಿನುತಂಗೆ ಮಾಡಲೊಡರಿಸಿ ಕಡುಪಿಂ ೯೪

ಹರಿಯುಂ ವ್ಯಾಘ್ರಮುಮುಪ್ಪುರುಗ್ರತರಕೋಪಾಟೋಪದಿಂ ಸತ್ತ್ವರು
ತ್ತರ ಜನ್ಮಂಗಳೊಳೆಂಬುದಚ್ಚರಿಯೆ ದೈತ್ಯಂ ಕ್ರೋಧದಿಂದಾಗಳಂ
ತಿರೆ ತದ್ರೂಪಮನಾಂತನೆಂದು ನುಡಿವನ್ನಂ ಕೊರ್ವ ವೈಕುರ್ವಣಂ
ಭರದಿಂ ಪಾಯ್ದುಡಮಳ್ಕದಿರ್ದನಚಳಂ ಶ್ರೀ ಪಾರ್ಶ್ವ ಯೋಗೀಶ್ವರಂ

ಕಹಕಹರಾವಂ ರೋದಃ
ಕುಹರಮನಾವರಿಸೆ ಸಿಂಹನಿಸ್ವನಮಾಶಾ
ನಿಹಿತಗಜಮದಮನುಡುಗಿಸೆ
ಬಹುವಿಧವಾಯುಧದಿನಳ್ಕಿಸುತ್ತಾರುತ್ತಂ ೯೫

ಆದೊರೆಯುಪಸರ್ಗಮನು
ತ್ಪಾದಿಸಿಯುಂ ಮುನಿಯ ಮನದ ಧೈರ್ಯಮನೆನಸುಂ
ಭೇದಿಸಲಾಱದೆ ನೆಱಪಿದ
ನಾ ದನುಜಂ ಭೂತಮಂ ಪ್ರಭೂತಮನಾಗಳ್ ೯೬

ಇಂತು ದಾನವಂ ನಿಜಸೇನೆವೆರಸು ಮಹೋಪಸರ್ಗಮಂ ನೀಡುಂ ಮಾಡುತ್ತಮಿರೆ ನಿಜಯೋಗದೊಳತ್ಯಗಣಿತಗುಣನಿಳಯನಚಳಿತಂ ನಿಲೆ ಮುನಿಪಂ

ಒಳಗೆ ನಿಜಧ್ಯಾನಾನಳ
ನಳುರೆ ಪೊಱಗೆ ದಾನವೋಪಸರ್ಗ ಮಹೋಗ್ರಾ
ನಳನಳುರೆ ಕರ್ಮಬಂಧಂ
ಗಳನಿತುಮುವು ದಗ್ಧರಜ್ಜುವೆನಿಸಿದವಾಗಳ್ ೯೭

[ಇತ್ತಲಾ] ದನುಜಂ ಮಾಳ್ಪುಪಸರ್ಗಮಾ ನಾಗರಾಜನ ಸಿಂಹಾ
ಸನ ಕಂಪಮಂ ಪಡೆಯೆ ತತ್ಸಂಬಂಧಮಂ ಬೋಧದಿಂದೆನಸುಂ ನಿಟ್ಟಿಸಿ
ನ್ನ ಕಾಂತೆಗುರಗೇಂದ್ರಂ ಪೇಳ್ದನೀಯಂದದಿಂ

ಪರಹಿತಚರಿತಂಗೆ ಜಗ
ದ್ಗುರುಗೆ ಭವಾನಳವಿದಗ್ಧ[ರಾ]ಗಿಯುಮುವಿದ
ಗ್ಧರೆನಿಪ್ಪ ನಮ್ಮನೀ ಸುಖ
ಪರಿಕರದೊಳ್ನಿಲಿಸಿದಂಗೆ ಮುಳಿ[ದು] ಖಳಂ * ೯೯

ದನುಜನೊಡರ್ಚುವಂ ಗಡುಪಸರ್ಗಮನಾತನ ಕೋಪವಹ್ನಿಯಾ
ತನನೆ ಕಱುತ್ತು ಸುಟ್ಟಪನೆ ವೃಶ್ಚಿವಿಷಪ್ರಭವಾಗ್ನಿಯಿಂದೆ ನೆ
ಟ್ಟನೆ ಸುಡುವಂ ಮನೋರಮಣಿಯಲ್ಲದೊ[ಡಾಮೆ] ಕೃತಘ್ನ[ರಾಗೆವೇ
ವನೆ] ಲಲಿತಾಂಗಿಯುಂ ಮನದೆಗೊಂಡಿರದಿಂಗಳೆ ಪೋಗಿ ಬೇಗದಿಂ ೧೦೦

ಅವನಂ ಭಂಗಿಸಿ ಪರಮಗುರುವಿನುಪಸರ್ಗಮಂ ಪಿಂಗಿಸಿ ಬರ್ಪುದೆ
ನಮಗೆ ಕರಣೀಯಮುಂ ಶ್ರೇಣೀಯಮುಮೆಂದು ತನ್ನಭಿಪ್ರಾಯಮಂ
ನಿಜಪ್ರೇಯಸಿಯುಮೊಡಂಬಡೆ ಬಂದು ಮಂದರಾಚಳದಂತಚಳಿತಚಿತ್ತ
ನಾಗಿರ್ದ ಪಾರ್ಶ್ವತೀರ್ಥೇಶ್ವರನಂ ನೋಡಿ
ಷ್ಟತಶುದ್ಧಧ್ಯಾನದಿಂದಂ ಮತಿ ತೊಲಗಿದುದೆ ದೃಷ್ಟಿ ನಾಸಾಗ್ರದಿಂ ಸೂ
ಸಿತೆ ವಕ್ತ್ರಾಂಭೋರುಹಂ ಸ್ಮೇರದೆ ಬೆದಱುದುದೆ ಕಾಯಮಾತ್ಮೀಯನಿರ್ವ್ಯ
ಗ್ರತೆಯಿಂ ಬರ್ಚಿತ್ತೆ ಜಾನುಪ್ರಗತಭುಜಯುಗಂ ನಿಷ್ಪ್ರಕಂಪತ್ವದಿಂ ಪಿಂ
ಗಿತೆ ಪೇಟೆಂದಾ ಮುನೀಂದ್ರಸ್ಥಿರತೆಗೆ ತಲೆಯಂ ತೂಗಿದಂ ನಾಗರಾಜಂ

ಅಂತು ನಾಗರಾಜಂ ಮೆಚ್ಚಿ ಬೞಿಯಂ ನಿಜವಲ್ಲಭೆಯೊಡನೆ
ಮೂಜಗಲೋಕದೊಡೆಯನಂ ಮೂಱುಸೂಳ್ವಲವಂದು ಬಂದಿಸಿ

ದನುಜವಧೆಯಿಂದಮುಘಬಂ
ಧನಮನಗಂ ಮುನಿಗಮಕ್ಕುಮೆಂದದನುೞಿದಾ
ದನುಜೇಂದ್ರನ ವಿದ್ಯಾಚ್ಛೇ
ದನಮಂ ಮಾಳ್ಪುದನೆ ಮನದೊಳವಳಂಬಿಸಿದಂ ೧೦೨

ಘನವೈಕುರ್ವಣದಕ್ಷನಪ್ಪ ದನುಜಂಗಂ ಭೀತಿಯುಪ್ಪಂತು ನೆ
ಟ್ಟನೆ ಲೋಕಾದ್ಭುತವಿಕ್ರಿಯಾಪರಿಣತಂ ಸೀಜಂ ಭಯಂಕ್ರಲ್ಲದಂ
ಜನೆನುತ್ತುಂ ಪಡೆದಂ ಸಹಸ್ರಫಣ ಸರ್ವಾಕಾರಮಂ ನಾಗರಾ
ಜನದಂತಲ್ಲದೊಡಕ್ಷಿಸೌಖ್ಯಕರ ಸೌಜನ್ಯಕಾರನೇಕಲ್ಲನೇ ೧೦೩

ಅಂತಗುರ್ವುಮದ್ಭುತಮಪ್ಪಂತು ವಿಗುರ್ವಿಸಿ

ದನುಜ ಕೃತೋಪಸರ್ಗಮುನಿತುಂ ಮುನಿರಾಜನೊಳಿಂತು ನಿಷ್ಫಳಂ
ಮುನಿಸಿನಿಗಾನುಮೇಯಿ ಪ್ರತೀಕಾರಮುಮಂತೆ ದಲಾದಡಂ ಸಮಂ
ತನಿಸಿಕುಮಿದಾ ಕೃತಜ್ಞತೆ ಕೃತಾರ್ಥಕೆಯುಂ ತನಗಾಯಲೆಂಬಿದಂ
ನೆನೆದೊನೆಪೆತ್ತಿದಂ ನಿಜಫಣಾಮಣಿ ಮಂಡ[ಪ]ಮಂ ಫಣೀಶ್ವರಂ ೧೦೪

ವಿಪುಳ ಫಣಾ ಮಂಡಳ ಮಂ
ಡಪಮಂ ಫಣಿರಾಜನೆತ್ತಿ ಬೋಧಿತ್ರಿಯು
ತ್ಯಪಗತಕಲ್ಮಷ ಪಾರ್ಶ್ವ
ಧಪತಿಗೆ ಸುವಿನಾಹಗೆಹಮೆನಿಸಿದಂದಾಗಳ್ ೧೦೫

ಪಿಡಿದಳ್ಪದ್ಮಾವತಿಯೊ
ಳ್ಪಿಡಿದ ಫಣಾಮಣಿಯ ಮೇಲೆ ಜಿನಪಂ ಭುವನ
ಕ್ಕೊಡೆಯಂ ದಲೆಂದು ವಜ್ರದ
ಕೊಡೆಯುಂ ಸಂಭ್ರಂಬದಿಂದೆ ಸೊಗಯಿಸುವಿನೆಗಂ ೧೦೬

[ಅದಂ ಕಂಡು]

ಭೂತಂಗಳ್ಫಣಿಪತಿಪರಿ
ಭೂತಂಗಳ್ದಜ ಪೋಗೆ ಪೋಗದೆ ಪತ್ತುಂ
ಭೂತಾನಂದಂ ತಾನಂ
ದಾತಕೊಪಂ ಮಹೋಪಸರ್ಗೋದ್ಧುಕ್ತಂ ೧೦೭

ಒದವಿಸುವಶ್ಮವೃಷ್ಟಿ ನವಮೌಕ್ತಿಕವೃಷ್ಟಿ ಸಮಸ್ತಶಸ್ತ್ರ ಜಾ
ಳದ ಮಳೆ ಪುಷ್ಪವೃಷ್ಟಿ ವಿಷವೃಷ್ಟಿ ಸುಧಾರಸವೃಷ್ಟಿ ವಿಸ್ಫುಲಿಂ
ಗದ ಮಳೆ ರತ್ನವೃಷ್ಟಿ ಜಳವೃಷ್ಟಿ ಸುಚಂದನವಾರಿವೃಷ್ಟಿ ರ
ಕ್ತದ ಮಳೆ ಕುಂಕುಮಾಂಬುವಿನ ವೃಷ್ಟಿದಲಾಯ್ತು ತಪಃಪ್ರಭಾವದಿಂ

ಇಂತು ಶಂಬರನೆಸಗಿದ ಮಹೋಪಸರ್ಗಮಂ ಕ್ಷಮೆಯೆಂಬಾಯುಧದಿಂ ಗೆಲೆ

ಧ್ಯಾನಮಹಾನಳಂ ತವಿಸೆ ಘಾತಿಚತುಷ್ಟಯ ಕಿಟ್ಟಮಂ ನಿಜಾ
ಧೀನಮನಂತವೀರ್ಯಸುಖದರ್ಶನಬೋಧ ಚತುಷ್ಟಯಂ ತ್ರಿಲೋ
ಕೀನುತಮಾತ್ಮಹೇಮದೊಳೆ ವರ್ಣವಿಶೇಷಮದಾಗೆ ಶೋಭಿಪಂ
ಮಾಸಿತ ಶೀಲರತ್ನನಿಧಿ ಪಾರ್ಶ್ವಜಿನಂ ಭುವನೈಕಭೂಷಣಂ ೧೦೯

ಇಂತು ಪ್ರಭುಗೆ ಕೇವಲಜ್ಞಾನೋತ್ಪತ್ತಿಯಾಗೆ ದೇವೇಂದ್ರಕೃತ ತತ್ಕಲ್ಯಾಣನಾಗಿರ್ಪುದುಂ

ಕಮಠನನಿಮಿತ್ತರೋಷಾ
ತ್ತಮನಂ ಪಲವುಂ ಭವಂಗಳೊಳ್ಕೊಲುತಂ ಸಂ
ದಮಳಗುಣನಿಳಯನಂ ವಿ
ಶ್ರಮಹಿತ ಮರುಭೂತಿಯುಂ ಜಗದ್ಧಿತಮತಿಯುಂ ೧೧೦

ಶಂಬರಭವದೊಳಾ ಭೂತಾನಂದಂ ಪರಮಾನಂದಮನೆಯ್ದಿ ಜಿನ
ಚರಣಮಂ ಶರಣ್ಬೊಕ್ಕು ಮಿಥ್ಯಾತ್ವಮನೊಕ್ಕು ವಿಮಳರತ್ನತ್ರಯ ವಿಭೂ
ಷಿತಂ ಸಮುಚಿತಕೋಷ್ಠದೊಳ್ಕುಳ್ಳಿರ್ಪುದುಮದಂ ಕಂಡು ತದ್ವನವಾಸಿ
ಗಳಪ್ಪೇಳ್ನೂರ್ವರ್ತಾಪಸರುಂ ಮಿಥ್ಯಾದರ್ಶನಾಸಂಯಮ ಕಷಾಯಾ
ಶುಭಯೋಗಮುಮಂ ಪತ್ತುವಿಟ್ಟು ಸಮ್ಯಗ್ದರ್ಶನ ತತ್ವಮಂ ಕೈಕೊಂಡದುವೆ
ಮೋಕ್ಷಮಾರ್ಗಮೆಂದು ಭಟ್ಟಾರಕರಂ ಪ್ರದಕ್ಷಿಣಂಗೆಯ್ದು ಸಂಯಮಮಂ
ಕೈಕೊಂಡರ್

ಪಾರ್ಶ್ವಭಟ್ಟಾರಕರನ್ವರ್ಥಸಹಸ್ರಾಷ್ಟನಾಮಧರರಾಗಿ ಸ್ವಯಂಭು
ಮೊದಲಾಗೆ ಪದಿಂಬರ್ಗಣಧರರುಂ ಮುನ್ನೂಱಯ್ವದಿಂಬಪೂರ್ವ

ಧರರುಂ ಸಾಸಿರದೊಂಬೈನೂರ್ ಶಿಕ್ಷಕರುಂ ಸಾಸಿರದ ನಾಲ್ನೂರ್ವರವಧಿಜ್ಞಾನಿಗಳುಂ ಸಾಸಿರ್ವರ್‍ಕೇವಲಿಗಳುಂ ಅನಿಬರೆ ವಿಕ್ರಿಯರ್ಧಿಪ್ರಾಪ್ತರುಂ ಏೞ್ನೂಱಯ್ವದಿಂಬರ್‍ಮನಃಪರ್ಯಯಜ್ಞಾನಿಗಳುಂ ಐನೂರ್ವರ್‍ವಾದಿಗಳುಂ ಸುಲೋಚನಾರ್ಯಿಕೆಯುಮೊರ್ದಲಾಗೆ ಮೂವತ್ತಾಱುಸಾಸಿರ್ವರಜ್ಜಿಯರುಂ ಒಂದುಲಕ್ಷ ಶ್ರಾವಕರುಂ ಮೂಱುಲಕ್ಷ ಶ್ರಾವಕಿಯರುಂ ಅಸಂಖ್ಯಾತ ದೇವರುಂ ದೇವಿಯರುಂ ಅಸಂಖ್ಯಾತ ತಿರ್ಯಗ್ಜಾತಿಗಳುಂ ಬೆರಸು ಧರ್ಮೋಪದೇಶಂಗೆಯ್ಯುತ್ತುಂ

ಆಱುವತ್ತುವರುಷಮೆಂಟುಂತಿಂಗಳ್ ವಿಹಾರಿಸಿ ಸಮ್ಮೇದಗಿರಿಯೊಳೊಂದು ತಿಂಗಳ್ ವಿಹರಣಮುಮಾದು ಮೂವತ್ತಱುವರ್ಮುನಿಯರ್ವೆರಸು ಪ್ರತಿಮಾಯೋಗದೊಳ್ ಶ್ರಾವಣಶುದ್ಧ ದಶಮಿಯ ಪೂರ್ವರಾತ್ರದೊಳ್ ವಿಶಾಖಾನಕ್ಷತ್ರದೊಳ್ ಪಾರ್ಶ್ವಭಟ್ಟಾರಕರ್ ಮುಕ್ತಿಗೆ ಸಂದರ್

ಕಮಠಂಗುಗ್ರತೆ ನಿನ್ನೊಳತ್ಯುಪಶಮಂ ದುಶ್ಚಿಂತೆಯಿಂ ಕರ್ಮಬಂ
ಧಮುಮಂಗಸ್ಖಳಿತಾತ್ಮಚಿಂತೆಯೊಳೆ ನಿನ್ನೊಳ್ಬಂಧವಿಚ್ಛಿತ್ತಿ ದು
ರ್ದಮ ಮಿಥ್ಯಾತ್ವಮಹತ್ವದಿಂದವನೊಳಜ್ಞಾನಂ ಸುದೃಷ್ಟಿತ್ವದು
ತ್ತಮಬೋಧಂ ನಿನಗಾಗೆ ಲೋಕಗುರುವಾದೈ ಪಾರ್ಶ್ವತೀರ್ಥೇಶ್ವರಾ

[ಎಂದು ಸ್ತುತಿಯಿಸಿ] ಸೌಧರ್ಮೇಂದ್ರಂ ಪರಿನಿರ್ವಾಣಮಹಾ ಕಲ್ಯಾಣಮಂ ಮಾಡಿ ಪೋದಂ.

ಅನುಬಂಧ ೧

ಕನ್ನಡ ಜೈನ ಪುರಾಣಗಳು

(ಆವರಣಗಳೊಳಗಿನ ಗ್ರಂಥಗಳು ದೊರಕಿಲ್ಲ. ಸಂಖ್ಯೆಗಳು ಕಾವ್ಯ ಹುಟ್ಟಿದ ಶತಮಾನವನ್ನು ಸೂಚಿಸುತ್ತವೆ. ಉಳಿದ ೧೩ ತೀರ್ಥಂಕರರನ್ನು ಕುರಿತು ಯಾವ ಪುರಾಣವೂ ಕನ್ನಡದಲ್ಲಿ ಹುಟ್ಟಿದಂತಿಲ್ಲ.)

೧. ಋಷಭ: ಪಂಪನ ಆದಿಪುರಾಣ (೧೦) ; [ಹಸ್ತಿಮಲ್ಲನ ಆದಿ ಪುರಾಣ (೧೩)].

೨. ಅಜಿತ: ರನ್ನನ ಅಜಿತಪುರಾಣ (೧೦).

೮. ಚಂದ್ರಪ್ರಭ: [ಶ್ರೀವಿಜಯನ ಚಂದ್ರಪ್ರಭ ಪುರಾಣ (೮)]; [ಶ್ರೀಧರಾಚಾರ್ಯನ ಚಂದ್ರಪ್ರಭ ಚರಿತೆ (೧೧)]; ಅಗ್ಗಳನ ಚಂದ್ರಪ್ರಭ ಪುರಾಣ (೧೨) ; ದೊಡ್ಡಯ್ಯನ ಚಂದ್ರಪ್ರಭ ಚರಿತೆ (೧೬); ದೊಡ್ಡಣಾಂಕನ ಚಂದ್ರಪ್ರಭಷಟ್ಪದಿ (೧೬).

೯. ಪುಷ್ಪದಂತ: ಗುಣವರ್ಮನ ಪುಷ್ಪದಂತ ಪುರಾಣ (೧೩).

೧೪. ಅನಂತ: ಜನ್ನನ ಅನಂತನಾಥ ಪುರಾಣ (೧೩).

೧೫. ಧರ್ಮ: ಮಧುರನ ಧರ್ಮನಾಥ ಪುರಾಣ (೧೪) ; [ಬಾಹುಬಲಿ ಪಂಡಿತನ ಧರ್ಮನಾಥ ಪುರಾಣ (೧೪)].

೧೬. ಶಾಂತಿ: ಪೊನ್ನನ ಶಾಂತಿಪುರಾಣ (೧೦) ; ಕಮಲಭವನ ಶಾಂತೀಶ್ವರ ಪುರಾಣ (೧೩); [ಶಾಂತಿಕೀರ್ತಿ ಮುನಿಯ ಶಾಂತಿನಾಥ ಚರಿತೆ (೧೬)].

೧೯. ಮಲ್ಲಿ: ನಾಗಚಂದ್ರನ ಮಲ್ಲಿನಾಥ ಪುರಾಣ (೧೧).

೨೨. ನೇಮಿ: ನೇಮಿಚಂದ್ರನ ಅರ್ಧನೇಮಿಪುರಾಣ (೧೨); ಕರ್ಣಪಾರ್ಯನ ನೇಮಿನಾಥ ಪುರಾಣ (೧೨) ; ಮಹಾಬಲ ಕವಿಯ ನೇಮಿನಾಥ ಪುರಾಣ (೧೩) ; ಮಂಗರಸನ ನೇಮಿಜಿನೇಶಸಂಗತಿ (೧೬).

೨೩. ಪಾರ್ಶ್ವ: ಪಾರ್ಶ್ವಪಂಡಿತನ ಪಾರ್ಶ್ವನಾಥ ಚರಿತೆ (೧೩).

೨೪. ವರ್ಧಮಾನ: ಆಚಣ್ಣನ ವರ್ಧಮಾನ ಪುರಾಣ (೧೨); ಪದ್ಮಕವಿಯ ವರ್ಧಮಾನ ಚರಿತೆ (೧೬).

ಅನುಬಂಧ ೨

ತ್ರಿಷಷ್ಟಿ ಶಲಾಕಾ ಪುರುಷರು

[ತ್ರಿಷಷ್ಟಿ ಶಲಾಕಾ ಪುರುಷರೆಂಬವರು ಜೈನರ ಅರುವತ್ತುಮೂವರು ಮಹಾಪುರುಷರು: ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲದೇವರು, ೯ ವಾಸುದೇವರು ಮತ್ತು ೯ ಪ್ರತಿವಾಸುದೇವರು. ತೀರ್ಥಂಕರರು ಜೈನಧರ್ಮರೀತ್ಯಾ ಮುಕ್ತಿಯನ್ನು ಸಾಧಿಸಿ ಜನರಿಗೆ ಧರ್ಮೋಪದೇಶ ಮಾಡಿದವರು. ಚಕ್ರವರ್ತಿಗಳು ಆ ತೀರ್ಥಂಕರರ ಕಾಲದಲ್ಲಿ ಷಟ್ಖಂಡ ಭೂಮಿಗೆ ಸ್ವಾಮಿಗಳಾಗಿದ್ದವರು. ವಾಸುದೇವರು ಭರತದ ಮೂರು ಖಂಡಗಳ ಸ್ವಾಮಿಗಳು. ಬಲದೇವರು ವಾಸುದೇವರ ಅಣ್ಣಂದಿರು. ಪ್ರತಿವಾಸುದೇವರು ಈ ಸೋದರರ ಶತ್ರುಗಳು. ಈ ಶಲಾಕಾಪುರುಷರೆಲ್ಲರೂ ಮೋಕ್ಷಗಾಮಿಗಳು. ಇವರು ಭರತ ಐರಾವತ ಕ್ಷೇತ್ರಗಳಲ್ಲಿ ಪ್ರತಿ ದುಷ್ಷಮಸುಷಮ ಕಾಲದಲ್ಲಿ ತಲೆದೋರುತ್ತಾರೆ.

ಚಾವುಂಡರಾಯನು ಬರೆದಿರುವ 'ತ್ರಿಷಷ್ಟಿ ಶಲಾಕಾ ಪುರುಷ ಚರಿತೆ'ಯ ವಿವರವನ್ನು ಕೆಳಗೆ ಕಾಣಿಸಿದೆ. ಇಲ್ಲಿಯ ಪುಟ ಸಂಖ್ಯೆ ಮೈಸೂರು ಓರಿಯಂಟಲ್ ಲೈಬ್ರರಿಯ ಹಸ್ತಪ್ರತಿ A 66ಕ್ಕೆ ಸಂಬಂಧಿಸಿದ್ದು.]

೧-೧೨೨ ಮೊದಲ ತೀರ್ಥಂಕರ ಋಷಭನ ಕತೆ.

ಆ ಕಾಲದ ಮೊದಲ ಚಕ್ರವರ್ತಿಯಾದ ಭರತನ ಕತೆ.

೧೨೩-೧೨೫ ಎರಡನೆಯ ತೀರ್ಥಂಕರ ಅಜಿತನ ಕತೆ.

೧೨೬-೧೨೯ ಆ ಕಾಲದ ಎರಡನೆಯ ಚಕ್ರವರ್ತಿ ಸಗರನ ಕತೆ.

೧೨೯-೧೩೧ ಮೂರನೆಯ ತೀರ್ಥಂಕರ ಸಂಭವನ ಕತೆ.

೧೩೨-೧೩೪ ನಾಲ್ಕನೆಯ ತೀರ್ಥಂಕರ ಅಭಿನಂದನನ ಕತೆ.

೧೩೫-೧೩೭ ಐದನೆಯ ತೀರ್ಥಂಕರ ಸುಮತಿಯ ಕತೆ.

೧೩೭-೧೩೯ ಆರನೆಯ ತೀರ್ಥಂಕರ ಪದ್ಮಪ್ರಭನ ಕತೆ.

೧೪೦–೧೪೫ ಏಳನೆಯ ತೀರ್ಥಂಕರ ಸುಪಾರ್ಶ್ವನ ಕತೆ.

೧೪೬–೧೪೮ ಎಂಟನೆಯ ತೀರ್ಥಂಕರ ಚಂದ್ರಪ್ರಭನ ಕತೆ.

೧೪೯–೧೫೧ ಒಂಬತ್ತನೆಯ ತೀರ್ಥಂಕರ ಪುಷ್ಪದಂತನ ಕತೆ.

೧೫೨–೧೫೪ ಹತ್ತನೆಯ ತೀರ್ಥಂಕರ ಶೀತಳನ ಕತೆ.

೧೫೫–೧೫೭ ಮೇಘರಥನ ಕತೆ.

೧೫೭–೧೫೯ ಹನ್ನೊಂದನೆಯ ತೀರ್ಥಂಕರ ಶ್ರೇಯಾಂಸನ ಕತೆ.

೧೬೦–೧೬೧ ಆ ಕಾಲದ ಮೊದಲನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ವಿಜಯ, ತ್ರಿಪಿಷ್ಟ, ಅಶ್ವಗ್ರೀವರ ಕತೆ.

೧೬೨–೧೬೪ ಹನ್ನೆರಡನೆಯ ತೀರ್ಥಂಕರ ವಾಸುಪೂಜ್ಯನ ಕತೆ.

೧೬೫–೧೬೬ ಆ ಕಾಲದ ಎರಡನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ಅಚಲ, ದ್ವಿಪಿಷ್ಟ, ತಾರಕರ ಕತೆ.

೧೬೭–೧೬೯ ಹದಿಮೂರನೆಯ ತೀರ್ಥಂಕರ ವಿಮಲನ ಕತೆ.

೧೭೦ ಆ ಕಾಲದ ಮೂರನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ಸುಧರ್ಮ, ಸ್ವಯಂಭು, ಮಧು ಎಂಬವರ ಕತೆ.

೧೭೧–೧೮೧ ವಿಮಳಭಟ್ಟಾರಕರ ೫೨ ಗಣಧರರಲ್ಲಿ ಮೇರು, ಮಂದರ ಎಂಬ ಇಬ್ಬರ ಕತೆ.

೧೮೨–೧೮೪ ಹದಿನಾಲ್ಕನೆಯ ತೀರ್ಥಂಕರ ಅನಂತನ ಕತೆ.

೧೮೫–೧೮೬ ಆ ಕಾಲದ ನಾಲ್ಕನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ಸುಪ್ರಭ, ಪುರುಷೋತ್ತಮ, ಮಧುಕೈಟಭರ ಕತೆ.

೧೮೭–೧೮೯ ಹದಿನೈದನೆಯ ತೀರ್ಥಂಕರ ಧರ್ಮನಾಥನ ಕತೆ.

೧೮೯–೧೯೦ ಆ ಕಾಲದ ಐದನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ಸುದರ್ಶನ, ಪುರುಷಸಿಂಹ, ಹಿರಣ್ಯರ ಕತೆ.

೧೯೧ ಅದೇ ಕಾಲದ ಮೂರನೆಯ ಚಕ್ರವರ್ತಿ ಮಘವನ ಕತೆ.

೧೯೧–೧೯೨ ಅದೇ ಕಾಲದ ನಾಲ್ಕನೆಯ ಚಕ್ರವರ್ತಿ ಸನತ್ಕುಮಾರನ ಕತೆ.

೧೯೩–೨೬೭ ಹದಿನಾರನೆಯ ತೀರ್ಥಂಕರ ಶಾಂತಿನಾಥನ ಕತೆ. ಆ ಕಾಲದಲ್ಲಿ ಅವನೇ ಐದನೆಯ ಚಕ್ರವರ್ತಿಯಾಗಿದ್ದ ಕತೆ.

೨೬೮–೨೭೦ ಹದಿನೇಳನೆಯ ತೀರ್ಥಂಕರ ಕುಂಥುನಾಥನ ಕತೆ; ಆ ಕಾಲದಲ್ಲಿ ಅವನೇ ಆರನೆಯ ಚಕ್ರವರ್ತಿಯಾಗಿದ್ದ ಕತೆ.

೨೭೧–೨೭೨ ಹದಿನೆಂಟನೆಯ ತೀರ್ಥಂಕರ ಅರನಾಥನ ಕತೆ.

೨೭೩–೨೭೭ ಆ ಕಾಲದಲ್ಲಿ ಅವನೇ ಏಳನೆಯ ಚಕ್ರವರ್ತಿಯಾಗಿದ್ದ ಕತೆ; ಎಂಟನೆಯ ಚಕ್ರವರ್ತಿ ಸುಭೌಮನ ಕತೆ; ಆರನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ನಂದಿಷೇಣ, ಪುಂಡರೀಕ, ನಿಶುಂಬರ ಕತೆ.

೨೭೮–೨೭೯ ಹತ್ತೊಂಬತ್ತನೆಯ ತೀರ್ಥಂಕರ ಮಲ್ಲಿನಾಥನ ಕತೆ.

೨೮೦–೨೮೧ ಆ ಕಾಲದ ಒಂಬತ್ತನೆಯ ಚಕ್ರವರ್ತಿ ಪದ್ಮನ ಕತೆ; ಏಳನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ನಂದಿಮಿತ್ರ, ದತ್ತ, ಬಲೀಂದ್ರರ ಕತೆ.

೨೮೨–೨೯೦ ಇಪ್ಪತ್ತನೆಯ ತೀರ್ಥಂಕರ ಮುನಿಸುವ್ರತನ ಕತೆ.

೨೯೧–೩೩೪ ಆ ಕಾಲದ ಹತ್ತನೆಯ ಚಕ್ರವರ್ತಿ ಹರಿಷೇಣನ ಕತೆ; ಎಂಟನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ರಾಮ, ಲಕ್ಷ್ಮಣ, ರಾವಣರ ಕತೆ.

೩೩೫–೩೩೭ ಇಪ್ಪತ್ತೊಂದನೆಯ ತೀರ್ಥಂಕರ ನಮಿನಾಥನ ಕತೆ.

೩೩೮ ಆ ಕಾಲದ ಹನ್ನೊಂದನೆಯ ಚಕ್ರವರ್ತಿ ಜಯಸೇನನ ಕತೆ.

೩೩೯–೩೮೬ ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥನ ಕತೆ. ಅದೇ ಕಾಲದ ಹನ್ನೆರಡನೆಯ ಚಕ್ರವರ್ತಿ ಬ್ರಹ್ಮದತ್ತನ ಕತೆ; ಒಂಬತ್ತನೆಯ ಬಲದೇವ ವಾಸುದೇವ ಪ್ರತಿವಾಸುದೇವರಾದ ಬಲರಾಮ, ಕೃಷ್ಣ, ಜರಾಸಂಧರ ಕತೆ.

೩೮೭–೩೯೩ ಇಪ್ಪತ್ತಮೂರನೆಯ ತೀರ್ಥಂಕರ ಪಾರ್ಶ್ವನ ಕತೆ.

೩೯೪-೪೬೯ ಇಪ್ಪತ್ತನಾಲ್ಕನೆಯ ತೀರ್ಥಂಕರ ಮಹಾವೀರ ; ಹಾಗೂ ಜೀವಂಧರ ಮುಂತಾದವರ ಕತೆ.

ಅನುಬಂಧ ೩

ಕೆಲವು ತೀರ್ಥಂಕರ ಪುರಾಣಗಳ ವಿಷಯ ಪರಿಚಯ

(ಸಂಖ್ಯೆಗಳು ಆಶ್ವಾಸವನ್ನು ಸೂಚಿಸುತ್ತವೆ.)

೧. ಪಂಪನ ಆದಿಪುರಾಣ

೧. ಮಹಾಬಳ ಕುಮಾರೋದಯಂ. ೨. ಲಲಿತಾಂಗದೇವ ವರ್ಣನಂ. ೩. ವಜ್ರಜಂಘಂ. ೪. ಚಾರಣಯುಗಳದಾನೋತ್ಸವಂ. ೫. ಸುವಿಧಿ ಮಹಿಮೋತ್ಪತ್ತಿ. ೬. ನಾಭಿರಾಜಂ (ಇದು ಪೂರ್ವಕತೆ).

೭. ಮಹೇಂದ್ರಾನಂದನೃತ್ತಂ. ೮. ಕರ್ಮಭೂಮಿನಿಯೋಗ ನಿರೂಪಣಂ. ೯. ಪರಿನಿಷ್ಕ್ರಮಣಕಲ್ಯಾಣಂ. ೧೦. ಕೇವಲ ಜ್ಞಾನೋತ್ಪತ್ತಿ. ೧೧. ಪರಿನಿರ್ವಾಣ ಕಲ್ಯಾಣಂ. (ಇದು ತೀರ್ಥಂಕರ ಕಥನ)

೧೨. ದಿಗ್ವಿಜಯ ಪ್ರಾರಂಭಂ. ೧೩. ಮಾಗಧವರ್ಪದಳನಂ. ೧೪. ಷಟ್ಖಂಡ ಮಂಡಳವಿಜಯಂ. ೧೫. ದಿಗ್ವಿಜಯ ಧ್ವಜಾರೋಹಣಂ. (ಇದು ಚಕ್ರವರ್ತಿ ಕಥೆ) ೧೬. ಉಪಾಸಕಾಧ್ಯಯನಂ.

೨. ರನ್ನನ ಅಜಿತಪುರಾಣ

೧. ಕಥಾಪರಿವರ್ಣನಂ. ೨. ಅನಿತ್ಯವರ್ಣನಂ. (ಇದು ಪೀಠಿಕೆ)

೩. ಕುಮಾರೋದಯ ವರ್ಣನಂ. ೪. ಜನ್ಮಾಭಿಷೇಕ ಕಲ್ಯಾಣ ವರ್ಣನಂ. ೫. ಪಟ್ಟಬಂಧೋತ್ಸವವರ್ಣನಂ. ೬. ದೀಕ್ಷಾಗ್ರಹಣ ವರ್ಣನಂ. ೭. ಸಮವಸರಣವರ್ಣನಂ. ೮. ಪರಿನಿರ್ವಾಣಕಲ್ಯಾಣ ವರ್ಣನಂ. (ಇದು ತೀರ್ಥಂಕರರ ಕತೆ.)

೯. ದಿಗ್ವಿಜಯ ವರ್ಣನಂ. ೧೦. ತಪೋವನಗಮನ ವರ್ಣನಂ. ೧೧. ಧರ್ಮೋಪದೇಶವರ್ಣನಂ. (ಚಕ್ರವರ್ತಿ ಕತೆ)

೧೨. ಪುರಾಣನಿರ್ವಾಣ ವರ್ಣನಂ. (ಮುಕ್ತಾಯ)

೩. ಅಗ್ಗಳನ ಚಂದ್ರಪ್ರಭ ಪುರಾಣ

೧. ಕಥಾವತರಣ ವರ್ಣನಂ. ೨. ಪದ್ಮನಾಭಮುನಿವಂದನಾಯಾತ್ರೋತ್ಸವಂ. ೩. ಶ್ರೀವರ್ಮೋದಯಪ್ರಮೋದ ವರ್ಣನಂ. ೪. ಶ್ರೀಧರಾಮರ ಸ್ವರ್ಗಾವತರಣ ವರ್ಣನಂ. ೫. ಶಶಿಪ್ರಭಾವಿರಹ ವಿಜ್ಞಾಪನಂ. ೬. ಚಕ್ರೋತ್ಪತ್ತಿ ವರ್ಣನಂ. ೭. ಅಜಿತಸೇನ ಚಕ್ರಧರ ವಸಂತೋತ್ಸವಂ. ೮. ಅಜಿತಸೇನ ಚಕ್ರಧರ ಚಂದ್ರಿಕಾವಿಹರಣ ವಿನೋದಂ. ೯. ಪದ್ಮನಾಭ ಮಹೀಶಮಂತ್ರಾಲೋಚನಂ. ೧೦. ವಿಜಯಜನಿತ ವೈರಾಗ್ಯ ವರ್ಣನಂ. (ಇದು ಪೂರ್ವಭಾಗ)

೧೧. ಗರ್ಭಾವತರಣ ಕಲ್ಯಾಣವರ್ಣನಂ. ೧೨. ಜಗನ್ನಾಥ ಜನ್ಮಾಭಿಷವಣ ಕಲ್ಯಾಣವರ್ಣನಂ. ೧೩. ಪರಿನಿಷ್ಕ್ರಮಣ ಕಲ್ಯಾಣಂ. ೧೪. ಕೇವಲಜ್ಞಾನೋದಯೋತ್ಸವಂ. ೧೫. ಸಮವಸರಣ ವರ್ಣನಂ. ೧೬. ನಿರ್ವಾಣಕಲ್ಯಾಣ ವರ್ಣನಂ. (ಇದು ತೀರ್ಥಂಕರ ಕತೆ)

೪. ಗುಣವರ್ಮನ ಪುಷ್ಪದಂತ ಪುರಾಣ

೧. ಪೀಠಿಕಾ ವಿವರಣಂ. ೨. ನಗರ ಸಂಪದ್ವರ್ಣನಂ. ೩. ನಾಯಕಾಭ್ಯುದಯ ವರ್ಣನಂ. ೪. ಕುಮಾರೋದಯ ವರ್ಣನಂ. ೫. ಯುವರಾಜ ದಿಗ್ವಿಜಯ ವರ್ಣನಂ. ೬. ಶಿಶಿರಸಮಯ ವರ್ಣನಂ. ೭. ದೂತಾಗಮನ ವರ್ಣನಂ. ೮. ಜಲಕೇಳೀ ವರ್ಣನಂ. (ಇದು ಪ್ರಾರಂಭ)

೯. ಗರ್ಭಾವತರಣ ಕಲ್ಯಾಣಂ. ೧೦. ದೇವಾಗಮನ ವರ್ಣನಂ. ೧೧. ಜನ್ಮಾಭಿಷೇಕೋತ್ಸವ ವರ್ಣನಂ. ೧೨. ಕುಮಾರ ಪರಿಣಯನೋತ್ಸವಂ. ೧೩. ಪರಿನಿಷ್ಕ್ರಮಣ ಕಲ್ಯಾಣಂ. ೧೪. ಪರಿನಿರ್ವಾಣ ಕಲ್ಯಾಣಂ. (ಇದು ತೀರ್ಥಂಕರ ಕತೆ)

೫. ಜನ್ನನ ಅನಂತನಾಥ ಪುರಾಣ

೧. ಪೀಠಿಕಾ ಪ್ರಕರಣಂ. ೨. ಸಿಂಹಸೇನ ಮಹಾರಾಜ ರಾಜ್ಯೋತ್ಸವ ವರ್ಣನಂ. ೩. ಪದ್ಮರಥ ರಾಜ್ಯ ವೈರಾಗ್ಯವರ್ಣನಂ. (ಇದು ಪೂರ್ವಭಾಗ)

೪. ಕುಮಾರೋದಯೋತ್ಸವ ವರ್ಣನಂ. ೫. ಜನ್ಮಾಭಿಷೇಕ ವರ್ಣನಂ. ೬. ವಸಂತೋತ್ಸವ ವರ್ಣನಂ. ೭. ಚಂದ್ರೋದಯ ವರ್ಣನಂ. ೮. ಕೌಮುದೀ ಮಹೋತ್ಸವ ವರ್ಣನಂ. ೯. ಕೇವಲ ಜ್ಞಾನಕಲ್ಯಾಣ ವರ್ಣನಂ. ೧೦. ಸಮವಸರಣ ವರ್ಣನಂ. ೧೪ ಪರಿನಿರ್ವಾಣಕಲ್ಯಾಣ ವರ್ಣನಂ. (ಇದು ಜಿನಕತೆ)

೧೧. ಪುರುಷೋತ್ತಮ ಕಥಾವತಾರ ವರ್ಣನಂ. ೧೨. ಸುಭದ್ರ ಪುರುಷೋತ್ತಮಾವತಾರ ವರ್ಣನಂ. ೧೩. ಸುಭದ್ರಪುರುಷೋತ್ತಮ ಸಮಾರಂಭ ವರ್ಣನಂ. (ಇದು ಬಲದೇವ ವಾಸುದೇವರ ಕತೆ)

೬. ಕಮಲಭವನ ಶಾಂತೀಶ್ವರ ಪುರಾಣ

೧. ಜ್ವಲನಜಟಿಮಹಾರಾಜ ರಾಜ್ಯಲಕ್ಷ್ಮೀವಿಲಾಸ ವರ್ಣನಂ. ೨. ಸ್ವಯಂಪ್ರಭಾದೇವಿ ತ್ರಿಪಿಷ್ಟ ಯುವರಾಜ ವಿವಾಹ ಕಲ್ಯಾಣ ವರ್ಣನಂ. ೩. ತ್ರಿಪಿಷ್ಟ ಯುವರಾಜ ವಿವಾಹ ವರ್ಣನಂ. ಸಿಂಹವಿಜಯ ವರ್ಣನಂ, ಬಲಭದ್ರಾಶ್ವಗ್ರೀವ ವಿಧ್ವಂಸನ ವರ್ಣನಂ. ಚಕ್ರಲಬ್ಧಿ ವರ್ಣನಂ. ೪. ಅಮಿತತೇಜಕುಮಾರೋದಯ ವರ್ಣನಂ, ಜ್ಯೋತಿಪ್ರಭಾದೇವೀ ಸ್ವಯಂವರ ವರ್ಣನಂ. ೫. ಸುತಾರಾಹರಣ ವರ್ಣನಂ. ೬. ಅಶನಿ ಘೋಷವಿಜಯ ವರ್ಣನಂ, ವಿಜಯ ಕೇವಲಿ ದರ್ಶನೋತ್ಪನ್ನ ವಿಷಾದ ತಿಮಿರ ವರ್ಣನಂ. ೭. ಅಪರಾಜಿತಾನಂತವೀರ್ಯಸಾಮ್ರಾಜ್ಯರಾಜ್ಯಲಕ್ಷ್ಮೀ ವಿಲಾಸವರ್ಣನಂ. ೮. ದಮಿತಾರಿ ವಿಜಯವರ್ಣನಂ. ೯. ಅನೇಕಾಂತಾರ್ಥ ಸಮರ್ಥನ ವರ್ಣನಂ. ೧೦. ವಜ್ರಾಯುಧನರೇಂದ್ರ ಚಂದ್ರ ಚಂದ್ರಿಕಾವಿರಹ ವರ್ಣನಂ. ೧೨. ವಜ್ರಾಯುಧ ಮಹಾರಾಜ ದಿಗ್ವಿಜಯ ವರ್ಣನಂ, ತದ್ವೈರಾಗ್ಯ ವರ್ಣನಂ, ಸೌಮನಕಲ್ಪಾಹಮಿಂದ್ರ ವರ್ಣನಂ, ಮೇಘರಥಕುಮಾರ ಬೋಧೋದಯ ವರ್ಣನಂ. ೧೩. ಮೇಘರಥಮಹಾರಾಜ ಚರ ಸರ್ವಾರ್ಥಸಿದ್ಧೀಶ್ವರಾವತರಣ ವರ್ಣನಂ. (ಇದು ಪೂರ್ವಕತೆ)

೧೪. ಗರ್ಭಾವತರಣ ಜನ್ಮಾಭಿಷೇಕವರ್ಣನಂ. ೧೫. ಶಾಂತೀಶ್ವರ ಚಕ್ರವರ್ತಿ ವಿಭವ ವರ್ಣನಂ, ದಿಗ್ವಿಜಯ ವರ್ಣನಂ, ವೈರಾಗ್ಯ

ವರ್ಣನಂ. ೧೬. ಪರಿನಿಷ್ಕ್ರಮಣ ಕಲ್ಯಾಣ ವರ್ಣನಂ, ಕೇವಲಿ ಜ್ಞಾನೋದಯವರ್ಣನಂ, ಸಮವಸರಣ ವಿಭವ ವರ್ಣನಂ, ನಿರ್ವಾಣ ಕಲ್ಯಾಣ ವರ್ಣನಂ. (ಇದು ಜಿನಕತೆ.)

೭. ನಾಗಚಂದ್ರದ ಮಲ್ಲಿನಾಥಪುರಾಣ

೧. ಪೀಠಿಕಾಪ್ರಕರಣಂ. ೨. ವೀತಶೋಕಪುರವರ್ಣನಂ. ೩. ಪುತ್ರದೋಹಳ ನಿರೂಪಣಂ. ೪. ಕುಮಾರೋದಯ ವರ್ಣನಂ. ೫. ವಸಂತ ಸಮಯ ವರ್ಣನಂ. ೬. ವನಕೇಳೀ ಜಲಕೇಳೀ ವರ್ಣನಂ. ೭ ಕೌಮುದೀ ಮಹೋತ್ಸವ ವರ್ಣನಂ. ೮. ಶರತ್ಸಮಯ ವರ್ಣನಂ. ೯. ಶ್ರೀಧರ ಕುಮಾರ ಪಟ್ಟಬಂಧೋತ್ಸವ ವರ್ಣನಂ. ೧೦. ವೈಶ್ರವಣ ವೈರಾಗ್ಯ ವರ್ಣನಂ. (ಇದು ಪೂರ್ವಕತೆ.)

೧೧. ತೀರ್ಥಂಕರ ಕುಮಾರೋದಯ ವರ್ಣನಂ. ೧೨. ಜನ್ಮಾಭಿಷೇಕ ವರ್ಣನಂ. ೧೩. ಪರಿನಿಷ್ಕ್ರಮಣ ಕಲ್ಯಾಣವರ್ಣನಂ. ೧೪. ಪರಿನಿರ್ವಾಣ ಕಲ್ಯಾಣ ವರ್ಣನಂ. (ಇದು ಜಿನಕತೆ.)

ಅನುಬಂಧ ೪

ತೀರ್ಥಂಕರ ಪುರಾಣದ ವರ್ಣನಾಭಾಗಗಳು.

(೧) ಪುರಾಣದ ಅಷ್ಟಾಂಗಗಳು:—

ಮುನಿವರ್ಗೋಕ್ತ ಪುರಾಣಪದ್ಧತಿಗೆ ಲೋಕಾಕಾರಮುಂ ತೀರ್ಥವ
ರ್ತನಮುಂ ವ್ಯಾಪ್ತ ಚತುರ್ಗತಿಸ್ಥಿತಿಗಳುಂ ಭಾಸ್ವತ್ತಪೋದಾನಕೀ
ರ್ತನಮುಂ ತತ್ಫಲಸಿದ್ಧಿಯುಂ ನೆಗಳ್ದ ವೈರಾಗ್ಯಂ ಕವಿಪ್ರೋಕ್ತಕಾ
ವ್ಯನಿಬಂಧೋಚಿತಮೆಂಟುಂ ದೇಶನಗರೀ ರಾಜೋತ್ತಮಾಖ್ಯಾನದಿಂ

—ಅನಂತನಾಥ ಪುರಾಣ. 1.66.

(೨) ಕಾವ್ಯದ ಅಷ್ಟಾದಶ ವರ್ಣನೆಗಳು:—

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಘೋರರಣಸ್ವಮಿತ್ರರುದಯಂ ಋತು ನಂದನಮುಂಬು ಸೀಧು ಕಾಂ
ತಾರತಿ ಚಂತೆ ಮಂತ್ರ ಚರಯಾನ ವಿರೋಧಿಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನಿಂಬು ಬಣ್ಣಿಪರ್

—ಮಲ್ಲಿಕಾರ್ಜುನ

ಶ್ರೀ ಅನಂತಕೀರ್ತಿ ಗ್ರಂಥಭಂಡಾರ

ಸ್ವರ್ಗೀಯ ಶ್ರೀ ಅನಂತಕೀರ್ತಿ ನಿರ್ಗ್ರಂಥ ಮಹಾಮುನಿಗಳ ದೀಕ್ಷಾಭೂಮಿಯಾದ ನೆಲ್ಲಿಕಾರಲ್ಲಿ ಅವರ ಸ್ಮಾರಕವಾಗಿ ಸ್ಥಾಪಿತವಾಗಿರುವ ಈ ಗ್ರಂಥಭಂಡಾರದಲ್ಲಿ ಈಗಾಗಲೇ ಕನ್ನಡ, ಸಂಸ್ಕೃತ, ಹಿಂದಿ, ಮರಾಠಿ ಮೊದಲಾದ ಭಾಷೆಗಳ ಸುಮಾರು ೬೬೦ ಜೈನಗ್ರಂಥಗಳು ಸಂಗ್ರಹಿಸಲ್ಪಟ್ಟಿವೆ. ಸಮಾಜಬಾಂಧವರು ಧರ್ಮಕಾರ್ಯಗಳಲ್ಲಿ ಈ ಗ್ರಂಥಭಂಡಾರವನ್ನು ಮರೆಯಬಾರದಾಗಿ ವಿನಂತಿ.

ಇತಿ ಸಮಾಜಸೇವಕ,

ಎಸ್. ಎಸ್. ಜೈನಿ,
ನೆಲ್ಲಿಕಾರ್, ದ. ಕ.

ಶ್ರೀ ಅನಂತಕೀರ್ತಿ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ

ಗ್ರಂಥಗಳು

ಗ್ರಂಥಗಳು	ಲೇಖಕರುಗಳು
ಅನಂತಮತಿಚರಿತೆ	ಜೈನಮಹಿಳೆ
ಲಕ್ಷ್ಮೀಬಾಯಿ	,,
ಅಹಿಂಸೆ	ಎಸ್. ಎಸ್. ಜೈನಿ
ಸತ್ತ್ವಪರೀಕ್ಷೆ	,,
ಶ್ರೀ ಪಾರ್ಶ್ವನಾಥ ತೀರ್ಥಂಕರ ಚರಿತ್ರೆ	ಗೋವಿಂದ ಪೈ
ಜೈನರ ಮೂರು ರತ್ನಗಳು	ಕೆ. ಭುಜಬಲಿ ಶಾಸ್ತ್ರಿ
ವೀರಜೀವನ	ಜಿ. ಶಿಶುಪಾಲ ಶಾಸ್ತ್ರಿ
ದ್ವಾದಶಾನುಪ್ರೇಕ್ಷೆ	ಎ. ಶಾಂತಿರಾಜ ಶಾಸ್ತ್ರಿ
ಪರಮಾತ್ಮಬೋಧೆ	,,
ಇಷ್ಟೋಪದೇಶ	,,
ಶ್ರೀ ಬಾಹುಬಲಿ ಗೋಮಟೇಶ್ವರ ಚರಿತ್ರೆ	ಗೋವಿಂದ ಪೈ

ಈ ಗ್ರಂಥಗಳು ದೊರೆಯುವ ಸ್ಥಳ:—

ಶ್ರೀವರ್ಮ ಶೆಟ್ಟಿ,
ಪಣಪಿಲ ಅರಮನೆ,
ಪೋಸ್ಟ್—ನೆಲ್ಲಿಕಾರ್, ದ. ಕ.